# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA








ಸಂಪುಟ:01 Volume:01 • ಸಂಚಿಕೆ:276 Issue:276 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 30.03.2024 • ಶನಿವಾರ Saturday • ಪುಟ:04 Page:04 • ಬೆಲೆ:2 Rs:2








## ಇಂಡಸ್ಟ್ರೀಯಲ್ ಶೆಡ್ ಸೈಟ್ ಮಾರಾಟಕ್ಕಿದೆ

ಹೊಸಪೇಟೆ ನಗರದ ಟಿ.ಬಿ.ಡ್ಯಾಂ ರಸ್ತೆ, ಶ್ರೀ ಸಾಯಿಬಾಬಾ ದೇವಸ್ಥಾನದ ಎದುರಿನ ಕೆಎಸ್‌ಎಸ್‌ಐಡಿಸಿ (KSSIDC) ಇಂಡಸ್ಟ್ರೀಯಲ್ ಪ್ರದೇಶದಲ್ಲಿರುವ ಅನ್ನಪೂರ್ಣ ಗ್ರಾನೈಟ್ ಶೆಡ್ ಹಾಗೂ ಖಾಲಿ ಜಾಗ (L-19, R-15 ) ಎರಡು ಸೈಟುಗಳ ಒಟ್ಟು ವಿಸ್ತೀರ್ಣ 10,300 ಚ.ಅಡಿ ಇದ್ದು, ಮಾರಾಟಕ್ಕಿರುತ್ತದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ

98441 25317
99861 33299

## ಹೊಲ ಮಾರಾಟಕ್ಕಿದೆ

ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ವ್ಯಾಪ್ತಿಯ ಡಣಾಯಕನ ಕೆರೆ ಕ್ರಾಸ್ ಬಳಿ ಕೂಡ್ಲಿಗಿ–ಹೊಸಪೇಟೆ ಎನ್.ಎಚ್ ರೋಡ್(NH ROAD) ಪಕ್ಕದಲ್ಲಿ 4 ಎಕರೆ ಹೊಲ ಮಾರಾಟಕ್ಕಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ

Contact: 94497 39665


# ಅಗತ್ಯ ಸೇವೆಯಲ್ಲಿರುವವರಿಗೆ ಅಂಚೆ ಮತದಾನಕ್ಕೆ ಅವಕಾಶ

## ಲೋಕಸಭಾ ಚುನಾವಣೆ ವಿಡಿಯೋ ಸಂವಾದದಲ್ಲಿ ಜಿಲ್ಲಾಧಿಕಾರಿ ದಿವಾಕರ ಹೇಳಿಕೆ




**ಹಂಪಿ ಟೈಮ್ಸ್ ಹೊಸಪೇಟೆ**

ಚುನಾವಣಾ ಆಯೋಗವು ಅಗತ್ಯ ಸೇವೆಗಳ ಇಲಾಖೆಗಳು ಮತ್ತು ವಲಯಗಳಾದ ಪೊಲೀಸ್, ಕೆಎಸ್‌ಆರ್‌ಟಿಸಿ, ರೈಲ್ವೆ, ಆರೋಗ್ಯ ಇಲಾಖೆ, ಆಲ್ ಇಂಡಿಯಾ ರೇಡಿಯೋ, ಅಗ್ನಿಶಾಮಕ, ಟ್ರಾಫಿಕ್ ಪೊಲೀಸ್, ಅಂಬ್ಯುಲನ್ಸ್ ಸೇವೆ ಸೇರಿದಂತೆ ವಿವಿಧ ಎವಿಇಎಸ್ ಕೆಟಗರಿಯವರಿಗೆ ಅಂಚೆ ಮತ ಚೀಟಿ ಮೂಲಕ ಮತದಾನ ಮಾಡಲು ಅವಕಾಶ ಕಲ್ಪಿಸಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ಜಿಲ್ಲಾಡಳಿತ ಭವನದಲ್ಲಿನ ಗುರುವಾರ ಸಂಜೆ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಇದುವರೆಗೆ ಆಗಿರುವ ಸಿದ್ಧತೆಗಳ ಬಗ್ಗೆ ಪರಿಶೀಲಿಸಿ ಮಾತನಾಡಿದರು. ಚುನಾವಣೆಯ ಕಾರ್ಯದಲ್ಲಿರುವ ಸರ್ಕಾರಿ ಹಾಗೂ ಖಾಸಗಿ ವಲಯಗಳ ಅಧಿಕಾರಿಗಳು ಮತ್ತು ಇತರೆ ಅಧಿಕಾರಿಗಳು ಮತ್ತು ಸಿಬ್ಬಂದಿಯು ನಿಯಮಾನುಸಾರ ನಮೂನೆಗಳನ್ನು ಭರ್ತಿ ಮಾಡಿ ಸಲ್ಲಿಸಿ ಅಂಚೆ ಮತಪತ್ರ ಪಡೆದು ಮತದಾನ ಮಾಡಬೇಕು.

ಈ ಹಿನ್ನೆಲೆಯಲ್ಲಿ ಎವಿಇಎಸ್ ಕೆಟಗೇರಿ ಎಂದು ಗುರುತಿಸಿದ ವಿವಿಧ ಇಲಾಖೆಗಳ ಮತ್ತು ಖಾಸಗಿ ವಲಯಗಳ ಮುಖ್ಯಸ್ಥರು ಈ ಬಗ್ಗೆ ವಿಶೇಷ ಕಾಳಜಿ ವಹಿಸಿ ತಮ್ಮ ತಮ್ಮ ಕಚೇರಿಗಳ ಮತ್ತು ವಲಯಗಳ ಅಧಿಕಾರಿಗಳು ಮತ್ತು ಸಿಬ್ಬಂದಿಯಿಂದ ನಿಗದಿತ ನಮೂನೆಯನ್ನು ಭರ್ತಿ ಮಾಡಿಸಿ ಅಂಚೆ ಮತಪತ್ರ ನೋಡಲ್ ಅಧಿಕಾರಿಗೆ ಸಲ್ಲಿಸುವ ಕಾರ್ಯವನ್ನು ಅತೀ ತುರ್ತಾಗಿ ಮಾಡಲು ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಚುನಾವಣೆ ಹಿನ್ನೆಲೆಯಲ್ಲಿ ಈಗಾಗಲೇ ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ಎಇಓ, ಎಟಿ, ಎಫ್‌ಎಸ್‌ಟಿ, ವಿಎಸ್‌ಟಿ, ವಿವಿಟಿ ತಂಡಗಳನ್ನು ರಚಿಸಿ ಆದೇಶಿಸಲಾಗಿದ್ದು ಈ ಎಲ್ಲ ತಂಡಗಳಲ್ಲಿನ ಅಧಿಕಾರಿಗಳು ಮುತುವರ್ಜಿವಹಿಸಿ ಕೆಲಸ ನಿರ್ವಹಿಸಬೇಕು. ಈಗಾಗಲೇ ಆರಂಭವಾಗಿರುವ ಕಂಟ್ರೋಲ್ ರೂಮ್, ದೂರು ಮೇಲ್ವಿಚಾರಣಾ ಕೇಂದ್ರ, ಮಾಧ್ಯಮ ಸೇರಿದಂತೆ ವಿವಿಧ ಕೇಂದ್ರಗಳು ಸರಿಯಾಗಿ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಚುನಾವಣೆ ಹಿನ್ನೆಲೆಯಲ್ಲಿ ಬೇರೆ ಬೇರೆ ಅಂಶಗಳ ಕುರಿತು ಕೈಗೊಂಡ ಕ್ರಮದ ಕುರಿತು ಅನುಪಾಲನಾ ವರದಿಗಳನ್ನು ನಿಗದಿತ ನಮೂನೆಯಲ್ಲಿ ನಿಗದಿಪಡಿಸಿದ ಅವಧಿಯೊಳಗೆ ಸಲ್ಲಿಸಲು ವಿವಿಧ ಸಮಿತಿಗಳ ನೋಡಲ್ ಅಧಿಕಾರಿಗಳು ಮುತುವರ್ಜಿ ವಹಿಸಬೇಕು.

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಮಾರ್ಚ 16ರಿಂದಲೇ ನೀತಿ ಸಂಹಿತೆ ಜಾರಿಯಾಗಿದ್ದು, ಯಾವುದೇ ಕಡೆಗಳಲ್ಲಿ ಮಾದರಿ ನೀತಿ ಸಂಹಿತೆ ಉಲ್ಲಂಘನೆಗಳು ನಡೆಯದಂತೆ ಮುನ್ನೆಚ್ಚರಿಕೆ ಮತ್ತು ತಿಳಿವಳಿಕೆ ನೀಡಬೇಕು. ಸಭೆ–ಸಮಾರಂಭಗಳಿಗೆ ಅನುಮತಿ ಕೋರಿ ಸಲ್ಲಿಕೆಯಾಗುವ ಅರ್ಜಿಗಳಿಗೆ ಕಡ್ಡಾಯವಾಗಿ ಷರತ್ತುಗಳನ್ನು ವಿಧಿಸಿ ಅನುಮತಿ ಪತ್ರ ನೀಡಬೇಕು.

>>4

# ನಾಡಕಚೇರಿಯಲ್ಲಿ ಬೆಂಕಿ ಕಂಪ್ಯೂಟರ್, ದಾಖಲೆ ಭಸ್ಮ




**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಪಟ್ಟಣದ ನಾಡ ಕಛೇರಿಯಲ್ಲಿ ಶುಕ್ರವಾರ ಸಂಜೆ ಕಾಣಿಸಿಕೊಂಡ ಬೆಂಕಿಯಿಂದ ಅಪಾರ ಪ್ರಮಾಣದ ನಷ್ಟ ಉಂಟಾಗಿದೆ.

ವಿದ್ಯುತ್ ಶಾಟ್ ಸರ್ಕ್ಯೂಟ್‌ನಿಂದ ಉಂಟಾದ ಅವಘಡದಿಂದ ಕಚೇರಿಯಲ್ಲಿದ್ದ ಲಕ್ಷಾಂತರ ರೂ.ಗಳ ಮೌಲ್ಯದ 3 ಕಂಪ್ಯೂಟರ್, 1 ಸ್ಕ್ಯಾನರ್, 1 ಪ್ರಿಂಟರ್, ಪೀಠೋಪಕರಣಗಳು ಹಾಗು ದಾಖಲೆ ಕಡತಗಳು ಸುಟ್ಟು ಭಸ್ಮವಾಗಿವೆ.

ಗುಡ್ ಫ್ರೈಡೆ ನಿಮಿತ್ತ ಕಚೇರಿಗೆ ರಜೆ ಇರುವ ಕಾರಣ, ಜನಸಂದಣಿ, ಸಿಬ್ಬಂದಿಗಳು ಇರದ ಕಾರಣ ಜೀವಹಾನಿಯಾಗಿಲ್ಲ ಎಂಬುದು ಸಮಾಧಾನದ ಸಂಗತಿ. ಸುತ್ತಲಿನ ನಿವಾಸಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ಮತ್ತು ಅಗ್ನಿಶಾಮಕ ಇಲಾಖೆಗೆ ಮಾಹಿತಿ ನೀಡಿದ್ದಾರೆ. ಹೊಸಪೇಟೆ ಅಗ್ನಿಶಾಮಕದಳ ಆಗಮಿಸಿ, ಬೆಂಕಿನಂದಿಸಿ ಆಗುತ್ತಿರುವ ಹೆಚ್ಚಿನ ಅನಾಹುತವನ್ನು ತಪ್ಪಿಸಿದರು. ಈ ಸಂಬಂಧ ಪಟ್ಟಣದ ಪೊಲೀಸ್ ಠಾಣೆ ಹಾಗು ಅಗ್ನಿಶಾಮಕದಳದವರು, ಉಪತಹಶಿಲ್ದಾರ ನಾಗರಾಜ್ ರವರು ನೀಡಿದ ಮಾಹಿತಿ ಮೇರೆಗೆ ದೂರು ದಾಖಲಾಗಿದೆ. ಕಂದಾಯ ಇಲಾಖೆಯ ಅಂದಾನಗೌಡ ಇದ್ದರು.








# ಪಿಡಿಒ ದೌರ್ಜನ್ಯಕ್ಕೆ ಖಂಡನೆ ಗ್ರಾಮ ಪಂಚಾಯಿತಿ ಸದಸ್ಯರ ಸಮಸ್ಯೆಗಳಿಗೆ ಪರಿಹಾರ ಒದಗಿಸಿ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**



ರಾಜ್ಯ ಸರ್ಕಾರವು ಗ್ರಾ.ಪಂ.ಗಳ ಸದಸ್ಯರ ಸಮಸ್ಯೆಗಳಿಗೆ ಸ್ಪಂದಿಸದೇ ಹೋದರೆ, ಉಗ್ರ ಹೋರಾಟಮಾಡುವುದಾಗಿ ಕರ್ನಾಟಕ ರಾಜ್ಯ ಗ್ರಾ.ಪಂ.ಗಳ ಸದಸ್ಯರ ಮಹಾ ಒಕ್ಕೂಟ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ಒಕ್ಕೂಟದ ವಿಜಯನಗರ ಜಿಲ್ಲಾ ಸಹ ಕಾರ್ಯದರ್ಶಿ ಹಾಗೂ ತಾಲೂಕಿನ ಗದ್ದಿಕೆರೆ ಗ್ರಾ.ಪಂ.ಅಧ್ಯಕ್ಷ ರಮೇಶ್ ಚಲವಾದಿ ಪತ್ರಿಕೆಯೊಂದಿಗೆ ಮಾತನಾಡಿ, ಇಂದು ರಾಜ್ಯ ವ್ಯಾಪಿ ಗ್ರಾ.ಪಂ.ಸದಸ್ಯರು ಜನರೊಂದಿಗೆ ಇರುತ್ತಾರೆ. ಸ್ಥಳೀಯ ಸಮಸ್ಯೆಗಳ ಬಗ್ಗೆ ಸಾಕಷ್ಟು ಮಾಹಿತಿ ಇರುತ್ತದೆ. ಅಲ್ಲದೆ, ಯಾವ ಯೋಜನೆಗಳು ಜನರಿಗೆ ಉಪಯುಕ್ತವಾಗುತ್ತವೆ ಎನ್ನುವುದು ಸ್ಪಷ್ಟವಾಗಿರುತ್ತದೆ. ಜೊತೆಗೆ ಸಾರ್ವಜನಿಕ ಫಲಾನುಭವಿಗಳಿಗೆ ನೇರವಾಗಿ ಸೌಲಭ್ಯ ತಲುಪುವ ನಿಟ್ಟಿನಲ್ಲಿ ಶ್ರಮಿಸಲಾಗುತ್ತದೆ. ಆದರೆ, ಅದು ಬಿಟ್ಟು, ಸರ್ಕಾರದ ಯೋಜನೆಗಳನ್ನು ಅಧಿಕಾರಿಗಳು ತಮ್ಮ ಮನಮಂದಂತೆ ಉಪಯೋಗಿಸುತ್ತಾ ಸದಸ್ಯರನ್ನು ಕಡೆಗಾಣಿಸುತ್ತಿದ್ದಾರೆ. ಜೊತೆಗೆ, ಸಾಮಾನ್ಯ ಸಭೆಗಳಲ್ಲಿ, ವಾರ್ಡ್ ಸಭೆಗಳಲ್ಲಿಯೂ ಸದಸ್ಯರ ಅಭಿಪ್ರಾಯ ಮತ್ತು ನಿರ್ಧಾರಗಳನ್ನು ನಿರ್ಲಕ್ಷಿಸುತ್ತಾರೆ. ಈ ಬಗ್ಗೆ ಪಂಚಾಯಿತಿ ಕಚೇರಿಗೆ ತೆರಳಿ ಕಾರಣ ಕೇಳುವುದಾಗಲಿ, ಅವರನ್ನು ಪ್ರಶ್ನಿಸುವುದಾಗಲಿ ಮಾಡಿದರೆ, ಸಮಾಧಾನ ಮಾಡಿ ಕಳಿಸುತ್ತಾರೆ. ಇದರಿಂದ ಸಾರ್ವಜನಿಕರಿಗೆ ಉತ್ತರಿಸುವುದು ಕಷ್ಟವಾಗುತ್ತದೆ. ಇಂತಹ ಸಮಸ್ಯೆಗಳೊಂದಿಗೆ ಸದಸ್ಯರು ಯಾವುದೇ ಮಾಹಿತಿ ಪಡೆಯಲು ಹೋದರೆ, ಕೆಲಬಾರಿ ಕೆಲ ಗ್ರಾ.ಪಂ.ಅಧಿಕಾರಿಗಳು ಬಹುತೇಕ ದರ್ಪದಿಂದಲೇ ದೌರ್ಜನ್ಯ ಎಸಗುತ್ತಿದ್ದಾರೆ. ಇಂತಹ ಘಟನೆ ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲೂಕಿನ ಜೆ.ವೆಂಕಟಪುರ ಗ್ರಾ.ಪಂ.ಸದಸ್ಯೆಯ ಮೇಲೆ ನಡೆದಿರುವ ಪಿಡಿಒ ದೌರ್ಜನ್ಯವನ್ನು ನಾವು ಖಂಡಿಸುತ್ತೇವೆ ಹಾಗೂ ಅವರ ಮೇಲೆ ಕ್ರಮಕ್ಕಾಗಿ ಆಗ್ರಹಿಸುತ್ತೇವೆ ಎಂದರು.

ಸಮಾಜದ ಗೌರವಕ್ಕಾಗಿ ಕಾರ್ಯನಿರ್ವಹಿಸುವ ಸದಸ್ಯರ ಸಮಸ್ಯಗೆ ಕೂಡಲೆ ಪಂಚಾಯತ್ ರಾಜ್ಯ ಸಚಿವರು, ಸಂಬಂಧಿಸಿದ ಮೇಲಾಧಿಕಾರಿಗಳು ಇತ್ತ ಗಮನ ಹರಿಸಿ, ರಾಜ್ಯಕ್ಕೆ ಮಾದರಿಯಾಗುವಂತ ತೀರ್ಮಾನ ತೆಗೆದುಕೊಂಡು ಗ್ರಾ.ಪಂ.ಸದಸ್ಯರ ಹಿತ ಕಾಪಾಡಬೇಕು ಎಂದು ಒತ್ತಾಯಿಸಿದ್ದಾರೆ.


## Best Franchise (Dealership) Opportunity

*in the following Pin codes*

*We are an innovative company Looking for Dynamic partners who can associate with us in exploring New Digital Business for a Life time Earnings*

| Sl.no | Location/s | Pin code | Sl.no | Location/s | Pin code |
|---|---|---|---|---|---|
| 1 | Koppal | 583227 | 11 | Gingera | 583228 |
| 2 | Gangavathi | 583227 | 12 | Toranagallu | 583123 |
| 3 | Sindhanoor | 584128 | 13 | Kampli | 583132 |
| 4 | Karatagi | 583229 | 14 | Sandur | 583119 |
| 5 | Kushtagi | 583227 | 15 | Bellary | 583101 |
| 6 | Ilkal | 587125 | 16 | Hampi-Kamalapur | 583239 |
| 7 | Yelburga | 583236 | 17 | Sirguppa | 583121 |
| 8 | Kuknoor | 583232 | 18 | H.B.Halli | 583212 |
| 9 | Tavargera | 583279 | 19 | Kudligi | 583135 |
| 10 | Sri Ramnagar | 583282 | 20 | Huvinahadgali | 583219 |

To know about the Company, the Business and your assocation with us and Your investment in various Pin codes listed above, Please attend our Up coming Business opportunity meeting at HOSPET - Post -583201 ( Vijayanagar Dist)

**Enroll yourself with us on**
**Wattsup No.9590556566 or**
**Call. Mob.9590556566**
**for initial details, with your profile**

Date of Meeting shall be shared once your registration is complete on our Wattsup number

## ವಚನ ಅರಿವು

### ತಕ್ಕ ಶಿಕ್ಷೆ

**ತೊಂಡಿಲ ಮುಡಿದುಕೊಂಡು**
**ತಮ್ಮ ತಮ್ಮ ಗಂಡರ ಹಿಂದುಗೊಂಡು**
**ನಾಡ ಮಿಂಡರ ನೋಡುತ್ತಲಿ,**
**ಇಂದು ನಮ್ಮ ಹುಲಿ ಹೋಯಿತ್ತು ಬನ್ನಿರೆ.**
**ಗಂಡರ ಗಂಡನವ್ವಾ ಕೂಡಲಸಂಗ,**
**ಕಂಡಡೆ ಮೂಗ ಕೊಯಿವಾ.**
**– ಬಸವಣ್ಣ**

ತಲೆತುಂಬ ಹೂ ಮುಡಿದುಕೊಂಡು, ಸಿಂಗರಿಸಿಕೊಂಡು ತಮ್ಮ ಗಂಡರ ಹಿಂದೆ ಹೋಗುವ ಹೆಂಡತಿಯು ತನು, ಮನ, ಭಾವದಲ್ಲಿ ಗಂಡನಿಗೆ ನಿಷ್ಠೆಯಿಂದ ಇರಬೇಕು. ಹಾಗೆ ಇರದೇ ಪರಪುರುಷರ ನೋಡಿ, ಬಯಸಿ, ಅವನ ಜೊತೆ ಕೂಡುವ ಕೆಟ್ಟ ಹೆಂಗಸರನ್ನು ಗಂಡ ಹುಲಿಯಾಗಿ ಅಥವ ಶಿವ ಮೂಗು ಕೊಯ್ದು ವಿಕಾರಗೊಳಿಸಿ, ಜೀವನದಲ್ಲಿ ತಕ್ಕ ಶಿಕ್ಷೆಯನ್ನು ನೀಡುತ್ತಾನೆ.
ಚಂಚಲ ಮನಸ್ಸಿನ ಮಹಿಳೆಯ ರೂಪಕ ಈ ವಚನದಲ್ಲಿದೆ. ಚಂಚಲತೆ ಮಹಿಳೆಗೆ ಮಾತ್ರ ಇರುತ್ತದೆಯೆ? ಅವಳಂತೆ ಪುರುಷನ ನಡೆ–ನುಡಿಯು ಪ್ರಶ್ನಾರ್ಹವಾಗಿದೆ. ಮುಖ್ಯವಾಗಿ ಈ ವಚನ ಮನುಷ್ಯನ ಅರೆ ಪ್ರಜ್ಞಾಸ್ಥಿತಿಯನ್ನು ಅನಾವರಣ ಮಾಡುತ್ತದೆ. ಭಕ್ತ ಸತಿಯಾಗಿ, ಲಿಂಗವೇ ಪತಿಯಾಗಿ ಆತ್ಮಸಂಗಾತದ ಸುಖದ ಸಾಧನೆಗೆ ಭಕ್ತನು ಸಮಚಿತ್ತದಿಂದ ಏಕದೇವ ನಿಷ್ಠೆಯಿಂದ ಇರಬೇಕು ಎನ್ನುತ್ತದೆ ಈ ವಚನ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಬೆಳಕಿನ ಹಾದಿ

### ಧರ್ಮರಾಯನ ಸ್ವಗತ



■ ಚೇತನ ಭಾರ್ಗವ

ಆ ಕ್ಷಣ ಬಂದೇ ಬಿಟ್ಟಿತು . ನಾವು ಪಂಚ ಪಾಂಡವರು ದ್ರೌಪದಿಯ ಸಮೇತ ನಾರುಮಡಿಯುಟ್ಟು ಹಿಮವತ್ಪರ್ವತಕ್ಕೆ ಹೊರಡುವ ಸಮಯ . ಕೃಷ್ಣನು ನಮ್ಮನ್ನು ಅಗಲಿದಾಗಲೇ ನಾವು ಇದನ್ನು ಮಾಡಬೇಕಾಗಿತ್ತು .ಅಂತೂ ನಿರ್ಧಾರ ಮಾಡಿ ಹೊರಟಾಯಿತು . ಕಠಿಣ ಹಾದಿ . ಪರ್ವತವನ್ನು ಕ್ರಮಿಸುವ ಆಯಾಸ ಬೇರೆ . ಬದರಿನಾಥ ಪರ್ವತ ಸಾಲು ದಾಟುವಾಗಲೇ ಕುಸಿದುಹೋಗುವಷ್ಟು ಆಯಾಸ . ನನಗೆ ಅದೇನೂ ನಿರ್ಮೋಹದ ವ್ಯಸನ ತಗುಲಿತ್ತು . ಮೊದಲಿಗೆ ದ್ರೌಪದಿಯು ಕುಸಿದಳು, ಹೆಣ್ಣಾಗಿ ಹುಟ್ಟಿ ಎಷ್ಟೆಲ್ಲಾ ಕಷ್ಟ ಅವಮಾನ ಮೆಟ್ಟಿ ನಿಂತಿದ್ದ ಆಕೆ ಪರ್ವತದ ಕಿಬ್ಬಿಯೊಳಗೆ ಕುಸಿದು ಹೋದಳು , ನೋವುಂಡ ಶರೀರ ಈ ಪರ್ವತದ ಏರು ತ್ರಾಸದ ಪ್ರಯಾಣ ತಾಳಲಿಲ್ಲವೋ ಅಥವಾ ಕರ್ಮದ ಗಂಟು ಕಳೆಯುತ್ತಾ ದೇಹ ಕಳಚುವ ಇಳಿಜಾರಿನ ಹಾದಿಯಲ್ಲಿ ಬಿದ್ದು ಮಣ್ಣಾದಳೋ ಈ ವ್ಯಾಖ್ಯಾನ ಕರ್ಮದ ಫಲಾನುಫಲದ ಜಿಜ್ಞಾಸೆಗೆ ಬಿಟ್ಟದ್ದು . ಈ ಭಾರಕ್ಕೆ ಕುಸಿದು ಬೀಳುವ ಸರದಿ ಈಗ ನನ್ನ ತಮ್ಮಂದಿರದು . ಎಲ್ಲವನ್ನೂ ತಿಳಿದಿದ್ದ ಸಹದೇವ , ಶೂರ ನಕುಲ , ಉಗ್ರ ಪ್ರತಾಪಿ ಅರ್ಜುನ , ಕೊನೆಗೆ ಬಲ ಭೀಮನೂ ಬೆಟ್ಟದ ಏರಿಯನ್ನು ಕ್ರಮಿಸಲಾಗದೆ ಕುಸಿದುಹೋದರು . ಆದರೆ ಆಶ್ಚರ್ಯವೆಂದರೆ ಊರಿನಿಂದ ಹಿಂಬಾಲಿಸಿಕೊಂಡು ಬಂದ ಒಂದು ನಾಯಿಯ ಬಿಟ್ಟು . ಅದಾವುದೋ ಮಾಯೆ ನನ್ನನ್ನು ನಡೆಸಿಕೊಂಡು ಹೋಗುತ್ತಲೇ ಇದೆ ತಮ್ಮಂದಿರ ಅಗಲಿಕೆಯ ಮಡದಿಯ ಮರಣಕ್ಕೂ ಶೋಕಿಸದಷ್ಟು . ಅಥವಾ ಕವಿದ ಮಾಯೆ ಸರಿದ ಪ್ರಭಾವವೋ ಆ ಕೃಷ್ಣನೇ ಬಲ್ಲ . ಅದೋ ಅಲ್ಲಿ ಇಂದ್ರ ರಥ ಸಮೇತನಾಗಿ ಸ್ವರ್ಗಕ್ಕೆ ಕರೆಯುತ್ತಿದ್ದಾನೆ, ಆದರೆ ಈ ನಾಯಿಯ ಹೊರತು ನನಗೆ ಹೋಗಲು ಮನಸಿಲ್ಲ. ಈ ಏಕಾಂಗಿ ಪಯಣದಲ್ಲಿ ಮನೆಯವರೆಲ್ಲಾ ಮರೆಯಾದರೂ ನನ್ನ ಜೊತೆಗಿದ್ದದು ಇದೊಂದೇ, ಇದು ಮಮಕಾರದ ಪ್ರಶ್ನೆಯಲ್ಲ. ಸಹ ಪ್ರಯಾಣಿಕನಿಗೆ ಕೊಡುವ ಸೌಜನ್ಯ, ಗೌರವ, ಒಂದು ತೆರನಾದ ನ್ಯಾಯವೇ, ನಂತರ ನಡೆದದ್ದೇ ಬೇರೆ, ನಾಯಿಯ ಜಾಗದಲ್ಲಿ ನನ್ನ ತಂದೆ ಯಮಧರ್ಮ ನಿಂತಿದ್ದಾನೆ, ಇಂದ್ರ ನಗುತ್ತಿದ್ದಾನೆ, ಇದು ನನ್ನ ಧರ್ಮನಿಷ್ಠತೆಯ ಪರೀಕ್ಷೆಯಂತೆ !. ದೊಡ್ಡವರು ಪರೀಕ್ಷೆ ಮಾಡುತ್ತಾರೆ ... ಆದರೆ ನನಗೆ ಅರ್ಥವಾದ ಧರ್ಮದ ಮರ್ಮವೇ ಬೇರೆ, ನಾನು ನನ್ನವರೆಂಬ ಮಮಕಾರವಿಲ್ಲದೆಯೇ ಎಲ್ಲರೂ ಸುಖವಾಗಿರಲಿ ಎಂಬ ಆರ್ಧ್ರತೆಯೇ ಧರ್ಮದ ಉಗಮ. ಯುದ್ಧವಾಗದೆ ಎಲ್ಲರೂ ಚೆನ್ನಾಗಿರಲಿ ಎಂದು ನಾನು ಆಸೆ ಪಟ್ಟಿದ್ದು ಅದಕ್ಕೆ. ಅದರಲ್ಲಿ ಮಮಕಾರವಿದ್ದಿತ್ತು. ಆದರೆ ಇಂದು ಜೊತೆ ಬಂದ ನಾಯಿಯ ವಿಚಾರ ಹಾಗಲ್ಲ . ಇದು ಮಮಕಾರವನ್ನು ಮೀರಿದ್ದು. ಅದಕ್ಕೆ ಇರಬೇಕುಅವರುನನ್ನನ್ನುಧರ್ಮಪರೀಕ್ಷೆಯಲ್ಲಿತೇರ್ಗಡೆಗೊಳಿಸಿದ್ದು. ದಯೆಯೇ ಧರ್ಮದ ಮೂಲ. ಧರ್ಮದ ಪಾಲನೆಯೇ ಮಾನವನ ನಿಜಬಲ ತಮ್ಮಂದಿರನ್ನು ನೋಡುವ ಬಯಕೆಯಾಗುತ್ತಿದೆ. ಸಶರೀರವಾಗಿ ಸ್ವರ್ಗಕ್ಕೆ ಏರುವ ಅವಕಾಶ. ಶರೀರ ಇರುವಷ್ಟು ಬಂಧನ ಸಹಜ, ಇದೆಲ್ಲವನ್ನು ಮೀರುವ ಕೃಷ್ಣ ಸಾಯುಜ್ಯ ಸೇರುವ ಪರಿ ಎಂತು?. ಅದು ಮತ್ತೊಂದು ಭಾರತದ ಕಥೆಯೇ ಇವೆಲ್ಲವೂ ಕೃಷ್ಣನ ಮಹಿಮೆಗೆ ಬಿಟ್ಟಿದ್ದು .. ......ಕೃಷ್ಣಾರ್ಪಣಮಸ್ತು ....

## 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.
**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ–ಮೇಲ್:hampitimes@gmail.com M: 9448633038

# ಮಕ್ಕಳ ಕಲರವ 'ಚಿವ್ ಚಿವ್ ಗುಬ್ಬಿ'

ಮಕ್ಕಳ ಪರೀಕ್ಷೆಗಳು ಮುಗಿಯುತ್ತಾ ಬಂದಿವೆ. ರಜೆಯಲ್ಲಿ ಮಕ್ಕಳಿಗೆ ಓದಿನ ರುಚಿ ಹತ್ತಿಸುವುದು ದೊಡ್ಡವರ ಜವಾಬ್ದಾರಿಯಾಗಿದೆ. ಓದು ಮಕ್ಕಳ ಬದುಕಿಗೆ ಮನೋರಂಜನೆ ಹಾಗೂ ಹೊಸ ವಿಷಯಗಳ ಜೊತೆಗೆ ಮತ್ತು ಸ್ಪೂರ್ತಿಯನ್ನು ನೀಡುವಂತಾದರೆ ಅದು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಈ ಹಿನ್ನಲೆಯಲ್ಲಿ ಕೆಲವು ಮಹತ್ತರ ಪುಸ್ತಕಗಳನ್ನು ಪರಿಚಯಿಸುವ ಆಶಯದಲ್ಲಿ ಈ ಲೇಖನ.

'ಮಕ್ಕಳ ಅಭ್ಯುದಯವೇ ದೇಶದ ಅಭ್ಯುದಯ', "ಮಕ್ಕಳಿದ್ದರೆ ಮನೆ ಚಂದ". ಈ ರೀತಿ ಅನೇಕ ಹೇಳಿಕೆಗಳನ್ನು ಹೇಳುತ್ತೇವೆ. ಆದರೆ ಆಚರಣೆಯಲ್ಲಿ ಮತ್ರಾ ಅದನ್ನು ತರುವುದಿಲ್ಲ. ಅದರಲ್ಲೂ ಕನ್ನಡ ಸಾಹಿತ್ಯದಲ್ಲಿ ಮಕ್ಕಳ ಕುರಿತು ಬರವಣಿಗೆ ತುಂಬಾ ವಿರಳ. . .ಬಂಗಾಳದಲ್ಲಿ ಒಬ್ಬ ವ್ಯಕ್ತಿಯನ್ನು ಸಾಹಿತಿ ಅಂತಹ ಕರಿಬೇಕಾದರೆ ಒಂದಾದರೂ ಮ್ಕಕಳ ಸಾಹಿತ್ಯ ರಚಿಸಿರಬೇಕು ಎಂಬ ಕಡ್ಡಾಯ ನಿಯಮ ಕಾಣುತ್ತೇವೆ. ಆದರೆ ನಮ್ಮಲ್ಲಿ ಮಕ್ಕಳ ಕುರಿತು ಗಂಭೀರವಾಗಿ ಚಂತನೆ ಮಾಡುವವರು ತುಂಬಾ ವಿರಳ ಎನ್ನ ಬಹುದು. ಕೆಲವರು ಇದಕ್ಕೆ ಹೊರತಾಗಿದ್ದಾರೆ.

ಮಕ್ಕಳ ಸಾಹಿತ್ಯದ ಬಗ್ಗೆ ಅರ್ಥಪೂರ್ಣ ಚರ್ಚೆಗಳು ನಡೆಯುತ್ತಿಲ್ಲ. ಬೇರೆ ಬೇರೆ ವಿಷಯಗಳ ವಿಚಾರ ಸಂಕಿರಣ, ಅಧ್ಯಯನ ನಡೆಯುತ್ತಿದ್ದರೂ ಮಕ್ಕಳ ಸಾಹಿತ್ಯ ನಿರ್ಲಕ್ಷಮಾಡಲಾಗುತ್ತಿದೆ. ಮಕ್ಕಳ ಸಾಹಿತ್ಯ ಎಂದರೆ ಏನು ಎಂಬ ಸ್ಪಷ್ಟತೆ ನಮಗಿಲ್ಲ. ಹೊಸತನಕ್ಕೆ ನಾವು ತೆರೆದುಕೊಳ್ಳುವ ಅವಶ್ಯಕತೆ ಇದೆ. ಮಕ್ಕಳನ್ನು ಆಧುನಿಕತೆಗೆ ತಕ್ಕಂತೆ ಸಿದ್ಧಗೊಳಿಸುವುದು ನಮ್ಮಗಳ ಬಹು ದೊಡ್ಡ ಜವಾಬ್ದಾರಿ. ಅದರಲ್ಲೂ ಸಾಹಿತ್ಯದ ಮೇಲೆ ಹೆಚ್ಚಿನ ಹೊಣೆಗಾರಿಕೆ ಇದೆ ಎಂದರೆ ತಪ್ಪಾಗಲಾರದು.ಾ ನಿಟ್ಟಿನಲ್ಲಿ ಬಳ್ಳಾರಿಯ ಎಸ್. ಮಂಜುನಾಥ ಒಂದು ಹೆಜ್ಜೆ ಮುಂದಕ್ಕೆ ಸಾಗಿದ್ದಾರೆ, ಅದರ ಫಲವೇ ಈ 'ಚಿವ್ ಚಿವ್ ಗುಬ್ಬಿ'.

ಈ ಕವನ ಸಂಕಲನದಲ್ಲಿ ಒಟ್ಟು 35 ಶಿಶುಪ್ರಾಸ ಗೀತೆಗಳಿವೆ. ಮಕ್ಕಳಿಗೆ ಹೆಚ್ಚು ಪ್ರಿಯವಾಗುವ ಲಯ, ಪ್ರಾಸ. ಗೇಯತೆ ಅಂಶಗಳನ್ನು ಮಂಜುನಾಥ ಚೆನ್ನಾಗಿ ಅರಿತಿದ್ದಾರೆ ಎನ್ನಿಸುತ್ತದೆ. ಪ್ರಾಸವನ್ನು ಕಷ್ಟಪಟ್ಟು ಜೋಡಿಸುವ ಪ್ರಯತ್ನ ಇಲ್ಲಿ ನಡೆದಿಲ್ಲ, ಇಷ್ಟಪಟ್ಟು ಬಳಕೆಯಾಗಿದೆ. ಉದಾಹರಣೆಗೆ ಮೊದಲ ಕವಿತೆ ಚಿವ್ ಚಿವ್ ಗುಬ್ಬಿಯಲ್ಲಿ. . . .ಗುಬ್ಬಿ, ಉಬ್ಬಿ, ತಬ್ಬಿ, ರುಬ್ಬಿ, ವಬ್ಬಿ, ಡಬ್ಬಿ, ಸುಬ್ಬಿ. . . ಇದೇ ರೀತಿಯಾಗಿ ಮಕ್ಕಳ ಮನಸ್ಸಿಗೆ ಅಗತ್ಯವಾದ ಸಂತಸ, ವಿಕಸನಕ್ಕೆ ಪೂರಕವಾಗಿ ಒಂದಕ್ಕಿಂತ ಒಂದು ಗೀತೆಗಳು ಮನ ಸೆಳೆಯುತ್ತವೆ.




ಡಾ.ಪರಮೇಶ್ವರಯ್ಯ ಸೊಪ್ಪಿಮಠ
ಶಿಕ್ಷಕರು, ಹಗರಿಬೊಮ್ಮನಹಳ್ಳಿ

Scan For Digital Colourful
HAMPI TIMES E-paper

ಚಿತ್ರವೆಂದರೆ ಎಲ್ಲಾ ಮಕ್ಕಳಿಗೂ ಇಷ್ಟ, ಹಾಗಾಗಿ ಈ ಪುಸ್ತಕಕ್ಕೆ ಹೆಚ್ಚು ಆಕರ್ಷಣೆ ಎಂದರೆ ಚಿತ್ರಗಳು. ದೇಶದ ಪ್ರಖ್ಯಾತ ಚಿತ್ರಕಲಾವಿದರಾದ ಬಿ.ಜಿ.ಗುಜ್ಜಾರಪ್ಪ ಅವರ ಚಿತ್ರಗಳು ಮಕ್ಕಳು ಗೀತೆಗಳನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಅವರಿಗೆ ಇಷ್ಟವಾಗುವಂತೆ ನೆರವಾಗಿವೆ. ಪುಸ್ತಕಕ್ಕೆ ಬಹು ದೊಡ್ಡ ಪ್ಲಸ್ ಪಾಯಿಂಟ್ ಎನ್ನಬಹುದು.

ಮಕ್ಕಳು ಮನುಷ್ಯರಿಗಿಂತ ಹೆಚ್ಚಾಗಿ ಪ್ರಾಣಿ–ಪಕ್ಷಿಗಳನ್ನು ಪ್ರೀತಿಸುತ್ತಾರೆ. ಅವರಿಗೆ ಕತೆಗಳಲ್ಲಿ ಪ್ರಾಣಿಗಳಿದ್ದರೆ ಉತ್ತಮ. ಈ ಹಿನ್ನಲೆಯಲ್ಲಿ ಬಂದಿರುವ ಗೆಳೆಯ ಮಂಜುನಾಥ ಕೂಡಾ ಈ ಹೊತ್ತಿಗೆಯಲ್ಲಿ ಮಕ್ಕಳಿಗೆ ಇಷ್ಟವಾಗುವ ಪ್ರಾಣಿ ಪಕ್ಷಿಗಳಾದ ಆನೆ, ಹಸು, ಕರಡಿ, ಕುರಿ, ಕೋಳಿ, ಗುಬ್ಬಿ ಜೊತೆಗೆ ಸುತ್ತಲಿನ ಪರಿಸರವನ್ನು ಗೀತೆಗಳ ಮೂಲಕ ಮಕ್ಕಳ ಮನಸ್ಸು ಗೆಲ್ಲುವ ಅವರ ಪ್ರಯತ್ನ




ಮೆಚ್ಚುವಂತಹದ್ದು. ಬಹಳ ಮುಖ್ಯವಾಗಿ ನಾವು ಪ್ರಾಣಿ ಪಕ್ಷಿಗಳ ಜೊತೆ ಹೊಂದಾಣಿಕೆಯ ಬದುಕನ್ನು ಸಾಗಿಸುವ ಪರಿಸರ ಧರ್ಮದ ಮೌಲ್ಯ ಹೆಚ್ಚಿಸುವ ಚಿವ್ ಚಿವ್ ಗುಬ್ಬಿ, ನಮ್ಮ ಮನೆಯ ನಾಯಿ, ಆನೆ, ಕುಕ್ಕು ಕೋ ಕೋಳಿ, ಹೂ, ಒಂಟೆ ಗೀತೆಗಳು ಸ್ಪೂರ್ತಿದಾಯಕವಾಗಿದೆ.

ಮಳೆಯ ಕುರಿತಾದ ಮೂರು ಗೀತೆಗಳಿವೆ. ಪರಿಸರ ಮತ್ತು ಹೊಂದಾಣಿಕೆ ಕುರಿತಾಗಿ ಎಳೆ ಬಿಸಿಲು ಗೀತೆಯಲ್ಲಿ ಚಳಿ ಮಳೆ ಜೊತೆಗೆ ಎಳೆ ಬಿಸಿಲಿನ ಮಹತ್ವ ತಿಳಿಸುತ್ತಾ ಇವು ಪಕೃತಿಯ ನಿಯಮಗಳು ನಾವು ಹೊಂದಿಕೊಳ್ಳಬೇಕು. ಪರಿಸರಕ್ಕೆ ಹೊಂದಿಕೊಳ್ಳಲಾರದ ಜೀವಿ ಉಳಿವುದಿಲ್ಲ ಎನ್ನುವ ಮಾರ್ಮಿಕ ಸಂದೇಶವಿದೆ.

ದೇಶ ಸೇವೆ ಮಗುವಿಗೆ ತನ್ನ ದೇಹದ ಭಾಗಗಳನ್ನ ತಿಳಿವುದರ ಜೊತೆಗೆ ದೇಹಕ್ಕಿಂತ, ಸ್ವಾರ್ಥಕ್ಕಿಂತ ದೇಶ ದೊಡ್ಡದು ಎನ್ನುವ ವಿಶಾಲರ್ಥದಲ್ಲಿ ದೇಶ ಸೇವೆ ಮಾಡಬೇಕು ಎನ್ನವ ಆಶಯದ ಗೀತೆ ಸೇವಾ ಮನೋಭಾವವನ್ನು ಪ್ರತಿಪಾದಿಸುತ್ತದೆ.

ಮಾಯಾ ಪೆಟ್ಟಿಗೆ ಗೀತೆ ಮೂಲಕ ಟಿವಿ ಇಂದು ಬಹುದೊಡ್ಡ ಮನೋರಂಜನಾ ಮೋಡಿ ಪೆಟ್ಟಿಗೆ ಎಂಬುದನ್ನು ಮಕ್ಕಳ ಮನ ಮುಟ್ಟುವಂತೆ ರಚಿಸಿದ್ದಾರೆ. ಇಲ್ಲಿ ಗೆಳೆಯ ಇನ್ನಷ್ಟು ಮುಂದೆ ಹೋಗಿ ಇದಕ್ಕೆ ಮಕ್ಕಳು ದಾಸರಾಗಬಾರದು ಎಂಬುದನ್ನು ಮಾರ್ಮಿಕವಾಗಿ ತಿಳಿಸಿದ್ದಾರತೆ. ಇದು ಪ್ರಸ್ತುತ ಹೆಚ್ಚು ಅಗತ್ಯ ಎಂದು ನನಗೆ ಅನಿಸುತ್ತಿದೆ. ಯಾಕೆಂದರೆ. .

ದೇಶದ ಮಾಧ್ಯಮಗಳು ಮತ್ತು ಸೆಲೆಬ್ರಿಟಿಗಳು ಹಣದ ಆಸೆಗಾಗಿ ಎಲ್ಲರನ್ನೂ ದಿಕ್ಕು ತಪ್ಪಿಸುವೆ. ರಿಯಾಲಿಟಿ ಶೋಗಳನ್ನು ಮಕ್ಕಳು ಆಧಾರವಾಗಿಟ್ಟುಕೊಂಡರೆ ಮಕ್ಕಳಿಗೆ ಭವಿಷ್ಯವಿಲ್ಲ, ನೈತಿಕತೆ ಇಲ್ಲದೇ ಬರೀ ಪ್ರಚಾರ ವ್ಯವಸ್ಥೆಯನ್ನು ಮಕ್ಕಳಿಗೆ ತೆರೆದಿಡುವುದು ಅಪರಾದ. ನಮ್ಮ ಮಕ್ಕಳಿಗೆ ವಾಸ್ತವವಾಗಿ ಶಿಕ್ಷಣಕ್ಕಿಂತ ಹೆಚ್ಚು ಸಮಾಜದಲ್ಲಿ ನಡೆಯುತ್ತಿರುವ ಕೆಟ್ಟ ಘಟನೆಗಳೇ ಹೆಚ್ಚು ತಲೆ ನೋವಾಗಿವೆ. ಮಕ್ಕಳ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡು ಅವರ ಭವಿಷ್ಯ ಉಜ್ವಲವಾಗಲು ಪ್ರಯತ್ನ ಗಂಭೀರವಾಗಿ ನಡೆಯಬೇಕಿವೆ.

ಆಧುನಿಕ ಆಹಾರ ಪದ್ಧತಿಯಿಂದ ನಮ್ಮ ಮಕ್ಕಳ ದೇಹದಲ್ಲಿ ಕಬ್ಬಿಣಾಂಶದ ಕೊರತೆಯಾಗುತ್ತಿದೆ. ಇದು ಅವರ ಜ್ಞಾಪಕ ಶಕ್ತಿಯನ್ನು ಮತ್ತು ಸೃಜನಶೀಲತೆಯನ್ನು ಕುಗ್ಗಿಸುತ್ತದೆ. ಈ ಹಿನ್ನಲೆಯಲ್ಲಿ ತಿನ್ನಲು ಬೇಕು ಕುರುಕುರಿ ಗೀತೆ ಗಮನ ಸೆಳೆಯುತ್ತದೆ.

ಶಿಶುಪ್ರಾಸಗಳು ಅತ್ಯಂತ ಚಿಕ್ಕವಾಗಿವೆ, ಅಂದರೆ ಕೆಲವೇ ಪದಗಳಲ್ಲಿವೆ ಆದರೆ ಓದಿದ ತಕ್ಷಣ ಅವು ಕೊಡುವ ಅನುಭವ, ಭಾವನೆಗಳು ಆ ಪದಗಳಿಗೂ ಮೀರಿದವಾಗಿವೆ.

ಮಂಜುನಾಥ ಮೂಲತಹ ವಿಜ್ಞಾನ ಇಷಯದಲ್ಲಿ ಹೆಚ್ಚು ಆಸಕ್ತರು, ಹಾಗಾಗಿ ಮಕ್ಕಳಿಗೆ ವಿಜ್ಞಾನದ ವಿಷಯಗಳನ್ನು ಅತ್ಯಂತ ಸರಳವಾಗಿ ಮತ್ತು ಸುಮದರ ಹೋಲಿಕೆಯೊಂದಿಗೆ ವಿವರಿಸಿರುವುದು ನಿಜವಾಗಿಯೂ ಶ್ಲಾಘನೀಯ ಕಾರ್ಯ. ಪಟಾಕಿ, ಮಳೆ ಬಿಲ್ಲು ಗೀತೆಗಳು ಆ ನಿಟ್ಟಿನಲ್ಲಿ ಗಮನ ಸೆಳೆಯುತ್ತವೆ.

ಬಣ್ಣ ಬಣ್ಣದ ವಾಚು ಗೀತೆಯು ವೃತ್ತ, ಆಯತ, ಚೌಕಾಕಾರವನ್ನು ಪರಿಚಯಿಸುವುದರ ಜೊತೆಗೆ ಬಣ್ಣಗಳ ಕುರಿತು ಮಕ್ಕಳ ಮನದಲ್ಲಿ ಮತ್ತಷ್ಟು ದೃಢ ಪಡಿಸುವ ಕೆಲಸ ಈ ಗೀತೆ ಮಾಡುತ್ತದೆ.

ಹಿರಿಯ ಸಾಹಿತಿಗಳ ಪ್ರಭಾವ ತಮ್ಮ ಮೇಲೆ ಆಗಿದೆ ಎಂದು ಮಂಜುನಾಥ ತಮ್ಮ ಮಾತುಗಳಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಹಾಗಾಗಿ ಜಿಪಿ ರಾಜರತ್ನಂ ಅವರ ಊಟದ ಆಟದಲ್ಲಿ ಅವರು ಊಟ ಮಾಡಿಸಿದ್ದರೆ ಇವರು ಪುಟ್ಟಿಯ ಸ್ನಾನ ದಲ್ಲಿ ಸ್ನಾನ ಮಾಡಿಸಿದ್ದಾರೆ.

ಮಕ್ಕಳಿಗೆ ಮನೋರಂಜನೆ ಜೊತೆಗೆ ಬದುಕನ್ನು ಕಟ್ಟಿಕೊಳ್ಳುವ ವಿಧಾನ ಮತ್ತು ಸಮಾಜಮುಖಿಯಾಗಿ ಮೌಲ್ಯಗಳನ್ನು ಬಿತ್ತುವ ಕೆಲಸವನ್ನು ಪುಸ್ತಕ ಮಕ್ಕಳಿಗೆ ಅರಿವಿಲ್ಲದಂತೆ ಮಾಡುತ್ತದೆ.

ಒಟ್ಟಾರೆಯಾಗಿ ಮುನ್ನುಡಿಯಲ್ಲಿ ಬರಗೂರು ರಾಮಚಂದ್ರಪ್ಪನವರು ಹೇಳುವಂತೆ ಶಿಶು ಸಾಹಿತ್ಯದಲ್ಲಿ ಪದ ಸಂಯೋಜನೆ ಸರಳವಾಗಿ ಕಂಡರೂ ಅದನ್ನು ರಚಿಸುವುದು ಸರಳವಲ್ಲ. ಯಾಕೆಂದರೆ ಬರೆಯುವವರ ವಯಸ್ಸು ದೊಡ್ಡದಾಗಿದ್ದು ಚಿಕ್ಕವರ ಮನಸ್ಸನ್ನು ಅರ್ಥಮಾಡಿಕೊಂಡು ಬರೆಯಬೇಕಾಗುತ್ತದೆ. ಇದು ಹೇಳಿದಷ್ಟು ಸುಲಭವಲ್ಲ. ಬರೆಯುವವರ ಮನಸ್ಸಿನಲ್ಲಿ ಮಗುವೊಂದು ಜನಿಸಿ, ಅದು ಕಲಿಯುವ ಅನುಭವವನ್ನು ಕಟ್ಟಿಕೊಡುವುದು ಶಿಶು ಸಾಹಿತ್ಯ ಸವಾಲು. ಈ ಸವಾಲನನ್ನು ಸೃಜನಶೀಲವಾಗಿ ಸ್ವೀಕರಿಸಿ ರಚಿಸಿದಾಗ ಉತ್ತಮ ಗೀತೆಗಳು ಹೊರಬರುತ್ತವೆ. ಇದೇ ಸಮಯದಲ್ಲಿ ಮಕ್ಕಳ ಮನೋಧರ್ಮದ ಬಗ್ಗೆ ಹೆಚ್ಚು ತಿಳಿದಿರಬೇಕು. ಮನೋರಂಜನೆ ಜೊತೆಗೆ ಮೌಲ್ಯವನ್ನು ಬೆರೆಸುವ ಕೌಶಲ ತಿಳಿದಿರಬೇಕು. ಅಚಿದರೆ ಮೌಲ್ಯಗಳ ಹೇರಿಕೆಯಾಗದಂತೆ, ಮನಸ್ಸು ಮಲಿನವಾಗದಂತೆ, ಮೆದುಳು ಜಡವಾಗದಂತೆ ರಚಿಸುವ ಶಿಶುಗೀತೆಗಳು ಮಕ್ಕಳ ಮನಸ್ಸನ್ನು ಅರಳಿಸುತ್ತವೆ. ಈ ಎಲ್ಲಾ ಅಂಶಗಳನ್ನು ಗೆಳೆಯ ಮಂಜುನಾಥ ತನ್ನದಾಗಿಸಿಕೊಂಡಿರುವುದರಿಂದ ಈ ಚಿವ್ ಚಿವ್ ಗುಬ್ಬಿ ತನ್ನ ಕಲರವವನ್ನು ಮಾಡುತ್ತಲಿದೆ.

# ಯುಗಾದಿ ಹಬ್ಬ: ಶ್ರೀ ಶೈಲಂ ಜಾತ್ರೆಗೆ ವಿಶೇಷ ಸಾರಿಗೆ ಸೌಲಭ್ಯ

■ **ಹಂಪಿ ಟೈಮ್ಸ್ ರಾಯಚೂರು:**

ಏ.1 ರಿಂದ 11 ರವರೆಗೆ ಶ್ರೀ ಶೈಲಂ ಜಾತ್ರೆ ನಡೆಯುತ್ತಿದ್ದು ಯುಗಾದಿ ಹಬ್ಬದ ದಿನದಂದು ಏ.9 ರಂದು ಮಲ್ಲಿಕಾರ್ಜುನ ಸ್ವಾಮಿ ರಥೋತ್ಸವ ಜರಗಲಿರುವ ಕಾರಣ ರಾಯಚೂರು ವಿಭಾಗ ವ್ಯಾಪ್ತಿಯಲ್ಲಿ ಬರುವ ರಾಯಚೂರು, ಲಿಂಗಸೂಗೂರು, ಸಿಂಧನೂರು, ಮಾನ್ವಿ, ಮಸ್ಕಿ, ದೇವದುರ್ಗ ಘಟಕಗಳಿಂದ 250 ವಿಶೇಷ ಬಸ್ಸುಗಳನ್ನು ಕಾರ್ಯಾಚರಣೆಗೆ ತರಲಾಗುತ್ತಿದ್ದು ಶ್ರೀ ಶೈಲಂ ಜಾತ್ರೆಗೆ ಹೋರಡುವ ಭಕ್ತಾಧಿಗಳಿಗೆ ಅನುಕೂಲವಾಗುವ ದೃಷ್ಠಿಯಿಂದ ರಾಯಚೂರು ಕೇಂದ್ರ ಬಸ್ ನಿಲ್ದಾಣ, ಸಿಂಧನೂರು ಬಸ್ ನಿಲ್ದಾಣ, ದೋರನಾಳ ಹಾಗೂ ಶ್ರೀ ಶೈಲಂ ಜಾತ್ರೆ ಪಾಯಿಂಟ್ ಸ್ಥಳಗಳಲ್ಲಿ 100 ಅಧಿಕಾರಿ/ಸಿಬ್ಬಂದಿಗಳನ್ನು ನೀಯೋಜಿಸಲಾಗಿರುತ್ತದೆ ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿಗಳು ತಿಳಿಸಿದ್ದಾರೆ.

ಬಸ್ಸುಗಳ ಕಾರ್ಯಾಚರಣೆ ಮಾರ್ಗವು ರಾಯಚೂರು, ಕರ್ನೂಲ್–ಶ್ರೀಶೈಲಂ. ಸಿಂಧನೂರು,ಆದೋನಿ–ಶ್ರೀ ಶೈಲಂ.
ಸಿಂಧನೂರು, ರಾಯಚೂರು, ಕರ್ನೂಲ್– ಶ್ರೀಶೈಲಂ.
ಲಿಂಗಸೂಗುರು, ಮಸ್ಕಿ, ಸಿಂಧನೂರು, ಆದೋನಿ–ಶ್ರೀ ಶೈಲಂ.
ಮಾನ್ವಿ, ರಾಯಚೂರು, ಕರ್ನೂಲ್– ಶ್ರೀಶೈಲಂ.
ಮಾನ್ವಿ, ಸಿಂಧನೂರು, ಆದೋನಿ– ಶ್ರೀ ಶೈಲಂ.
ಮಸ್ಕಿ,ರಾಯಚೂರು,ಕರ್ನೂಲ್–ಶ್ರೀಶೈಲಂ.
ಮಸ್ಕಿ, ಸಿಂಧನೂರು, ಆದೋನಿ– ಶ್ರೀಶೈಲಂ.
ದೇವದುರ್ಗ, ರಾಯಚೂರು, ಕರ್ನೂಲ್– ಶ್ರೀಶೈಲಂ. ಮಾರ್ಗವಾಗಿ ಚಲಿಸಲಿವೆ.


50 ಪ್ರಯಾಣಿಕರು ಲಭ್ಯ ಇದ್ದಲಿ ಅವರ ಸ್ವ ಸ್ಥಳದಿಂದ



ನೇರವಾಗಿ ಶ್ರೀಶೈಲಂಗೆ ಬಸ್ ವ್ಯವಸ್ಥೆಯನ್ನು ಒದಗಿಸಲಾಗುವುದು ಹಾಗೂ ಪ್ರಯಾಣಿಕರ ಆಸಕ್ತಿ ಮೇರಿಗೆ ಮಹಾನಂದಿಗೂ ಸಹಾ ಕರೆದುಕೊಂಡು ಹೋಗಲಾಗುವುದು.

ಹೆಚ್ಚಿನ ಮಾಹೀತಿಗಾಗಿ ಘಟಕ ವ್ಯವಸ್ಥಾಪಕರನ್ನು ಸಂಪರ್ಕಿಸಬಹುದು ರಾಯಚೂರು–2ನೇ ಘಟಕ 7760992364, ರಾಯಚೂರು–3ನೇ ಘಟಕ 7619351087, ಲಿಂಗಸೂಗೂರು ಘಟಕ 7760992365, ಸಿಂಧನೂರು ಘಟಕ 7760992366, ಮಾನವಿ ಘಟಕ 7760992367, ದೇವದುರ್ಗ ಘಟಕ 7760992368, ಮಸ್ಕಿ ಘಟಕ 7760992361, ಕೇಂದ್ರ ಬಸ್‌ನಿಲ್ದಾಣ ರಾಯಚೂರು 7760992370, ವಿಭಾಗೀಯ ಸಂಚಾರ ಅಧಿಕಾರಿ 7760992352 ಎಂದವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕುಸುಮ



■ ಸುವರ್ಣಾ ಭಟ್ಟ.

ಮನೆ ಕೆಲಸಗಳ ಮಾಡಿಟ್ಟುಕೊಂಡು ಮಗಳ ದಾರಿ ಕಾಯುತ್ತಾ ಕುಳಿತಳು ನಯನ.

ಅಮ್ಮಾ ! ಎಂದು ಕೂಗುತ್ತಾ! ಕಾಲೇಜು ಮುಗಿಸಿ ಮನೆಯೊಳಗಡೆ ಕಾಲಿರಿಸಿದಳು ಅನುಪಮ.

ಮಗಳಿಗೆ ಕಾಫಿ , ತಿಂಡಿ ಕೊಟ್ಟು, ಭಗವದ್ಗೀತೆ ಓದುತ್ತಾ ಕುಳಿತವಳಿಗೆ ಟೀ ಕೊಡು ನಯನ ತುಂಬಾ ತಲೆನೋವು ಎಂದು ಇವಳ ಕರೆಯುತ್ತಿರುವ ಗಂಡ ನರಸಿಂಹನ ಧ್ವನಿ ಕೇಳಿ ತಾನು ಓದುತ್ತಿದ್ದ ಪುಸ್ತಕ ಮಡಸಿಟ್ಟು ಹೊರ ಬಂದಳು.

ಗಂಡನಿಗೆ ಟೀ ಕೊಟ್ಟು ಹೊರ ಬಂದವಳಿಗೆ ವಾಕಿಂಗ್ ಮುಗಿಸಿಕೊಂಡು ಕೈಯಲ್ಲಿ ಕೋಲಿಡಿದು ಬರುತ್ತಿರುವ ತನ್ನಮ್ಮ ಕುಸುಮ ಕಾಣಲು ತುಟಿ ಬಿರಿದು ನಕ್ಕು ಕುಸುಮ ಹತ್ತಿರ ಹೋಗಿ ಅಮ್ಮಾ! ಕೈ ಕೊಡಿ ನಾನು ಇರುವಾಗ ಕೋಲು ಯಾಕಮ್ಮ ಎಂದಳು ನಯನ.

ನನ್ನ ಕೈಯಲ್ಲಾಗುವವರೆಗೂ ನಾನು ನಿನ್ನ ಸಹಾಯ ಬಯಸೊಲ್ಲ ಮಗಳೇ, ದೇಹ ಆಲಸ್ಯವಾಗುತ್ತೆ. ಅದಕ್ಕಾಗಿ ಈ ಓಡಾಟ ಎಲ್ಲ ಎಂದರು.

ಯಾಕಮ್ಮ! ಈ ಮಗಳು ನಿಮ್ಮ ಸೇವೆ ಮಾಡುವುದು ನಿಮಗೆ ಇಷ್ಟವಿಲ್ಲವಾ? ಹೇಳಿ. ಅಂದು ನಿಮ್ಮ ಮನೆಯ ಮುಂದೆ ಆಗ ತಾನೇ ಹುಟ್ಟಿದ ನನ್ನ ಬಿಟ್ಟು ಹೋದಳಲ್ಲ ನನ್ನ ಹೆತ್ತವ್ವ ಆಗ ನನ್ನ ನೋಡಿದ ನೀವು ಇಂದು ಈ ಸುಖಿ ಸಂಸಾರ ಸಿಗುವವರೆಗೂ ಕಾರಣಕರ್ತರಲ್ಲವೆನಮ್ಮ. ನೀವು ಮದುವೆಯಾಗದೆ ನನ್ನ ಈ ಸಮಾಜದಲ್ಲಿ ಬೆಳೆಸಿ, ಶಿಕ್ಷಣ ಕೊಟ್ಟರಲ್ಲ ಅದರ ಮುಂದೆ ನಾನು ನಿಮಗೆ ಏನು ಸೇವೆ ಮಾಡಿದರು ಕಡಿಮೆ ಕಣಮ್ಮ ಎಂದು ಹೇಳುತ್ತಾ! ಕಣ್ಣೀರೆಸಿಕೊಂಡಳು ನಯನ.

ಅಲ್ಲೆ ಕುಳಿತ ಕುಸುಮ ಮಗಳ ಕೈ ಹಿಡಿದು ಕೂರಿಸಿಕೊಂಡು ಹೇ ಹುಚ್ಚಮ್ಮ! ಯಾರು ಇದನ್ನೆಲ್ಲ ನಿನ್ನ ಪುಟ್ಟ ತಲೆಯಲ್ಲಿ ತುಂಬಿದ್ದು?. ನೀನು ನನ್ನ ಮಗಳು. ನಿನಗೆ ಅಪ್ಪ ಅಮ್ಮ ಎಲ್ಲ ನಾನೇ ಎಂದರು.

ನನಗೆ ಎಲ್ಲ ವಿಷಯ ತಿಳಿದಿದೆಯಮ್ಮ ಪಕ್ಕದ ಮನೆಯ ಶಾಂತಜ್ಜಿ ನನಗೆ ಎಲ್ಲವನ್ನು ತಿಳಿಸಿದ್ದಾರೆ. ಮತ್ತೆ ಸತ್ಯ ಮುಚ್ಚಿಡುವ ಪ್ರಯತ್ನ ಮಾಡದಿರು. "ಹೆತ್ತ ತಾಯಿಗೆ ಬೇಡದ ಮಗುವಿನ ಜವಾಬ್ದಾರಿ ಹೊತ್ತ ನೀವು ದೇವರಮ್ಮ ನಿಮ್ಮ ಋಣವ ನನಗೆ ತೀರಿಸಲಾಗದು ಎಂದು ಹೇಳಿ ನಯನ ತನ್ನಮ್ಮ ಕುಸುಮಳ ಮಡಿಲಲ್ಲಿ ಮಲಗಿದಳು".

ನಯನ ಮೂವತ್ತು ವರ್ಷದ ಹಿಂದೆ ಅಳುತ್ತಿರುವ ಕಂದನಂತೆ ಕಾಣಿಸಲು ಕುಸುಮ ಅವಳ ತಲೆ ಸವರಿ ಹಣೆಗೆ ಪ್ರೀತಿಯಿಂದ ಮುತ್ತಿಟ್ಟರು.

ಕವಿ ಮನಸು

## ಸಿಂಗಾರಿಯಮೋಡಿ



ಬಂಗಾರದೊಡವೆಯಲಿ
ಶೃಂಗಾರಗೊಂಡಿರುವೆ
ಸಿಂಗಾರಿ ಸೆಳೆದೆ ನೀ ಮೋಡಿ ಮಾಡಿ
ಬೆಂಗಾಡು ನೆಲದಲ್ಲಿ
ಮುಂಗಾರು ಸುರಿದಂತೆ
ದಂಗಾಗಿ ಹೋಗಿರುವೆ ಚಂದ ನೋಡಿ

ಸಿಂಧೂರ ಸೊಗಸಾಗಿ
ಕಂಡಾಗ ಹಣೆಯಲ್ಲಿ
ಸಂದೇಹ ಉಳಿದಿಲ್ಲ ಬಂದೆ ಅರಸಿ
ಒಂದಾಗಿ ಒಲವಲ್ಲಿ
ಬಂದಾಗ ಜೊತೆಯಲ್ಲಿ
ನಿಂದಾಗ ಸಂತೋಷ ನೋಟ ಬೆರೆಸಿ॥

**– ಪೆರ್ಮುಖ ಸುಬ್ರಹ್ಮಣ್ಯ ಭಟ್**

## ನಾಟಕ



ಅಭಿನಯವ ಮಾಡಬೇಕಿದ್ದರೆ ನಾಟಕ
ಹೊಯ್ಯಬೇಕು ಅಭ್ಯಾಸವನ್ನೆಲ್ಲ ಎರಕ
ನಿರಂತರವಾಗಿಸಬೇಕು ಶ್ರದ್ಧೆಯ ಜಳಕ
ನಟನಿಗಿರಲಿ ಸೆಳೆತದ ಶಕ್ತಿ ಸಮ್ಮೋಹಕ

ಪಾತ್ರಧಾರಿ ತುಂಬಬೇಕು ಪಾತ್ರಕ್ಕೆ ತೂಕ
ಬೆರೆತಂತಿರಬೇಕು ನವರಸದ ಸಿಹಿಪಾಕ
ಜೀವತುಂಬಬೇಕು ಮರೆತೆಲ್ಲಾ ಆತಂಕ
ಸಿಗುವುದಾಗಲೇ ನಾಟಕಕ್ಕೆ ನಿಜ ಅಂಕ

ನಾಟಕಗಳನ್ನು ಮೆಚ್ಚಬೇಕು ಈ ಲೋಕ
ಪ್ರೋತ್ಸಾಹಗಳನ್ನು ನೀಡಬೇಕು ಪ್ರೇಕ್ಷಕ
ವೀಕ್ಷಿಸಿ ಮೈಮರೆತ ಅವನಾಗಲಿ ಮೂಕ
ಆಗಲೇ ತೆರೆದಂತೆ ಸಾರ್ಥಕತೆಯ ನಾಕ

**– ವಿಜಯಲಕ್ಷ್ಮಿ ನಾಯ್ಕ್ ಬಿಳಿಯೂರು**
**ದಕ್ಷಿಣ ಕನ್ನಡ ಜಿಲ್ಲೆ**




ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಚುನಾವಣಾ ಪ್ರಚಾರದ ಮೇಲೆ ಹದ್ದಿನ ಕಣ್ಣು

### ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿಕೆ । ಸೋಷಿಯಲ್ ಮೀಡಿಯಾ ಪ್ರಚಾರಕ್ಕೂ ಅನುಮತಿ ಕಡ್ಡಾಯ
### ರಾಜಕೀಯ ಜಾಹೀರಾತುಗಳಿಗೆ ಪೂರ್ವಾನುಮತಿ ಕಡ್ಡಾಯ । ಮತದಾನ ಜಾಗೃತಿಗೆ ಮಾಧ್ಯಮಗಳ ಪಾತ್ರ ಮುಖ್ಯ

**■ ಹಂಪಿ ಟೈಮ್ಸ್ ಬಳ್ಳಾರಿ**

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಡೆಯುವ ಚುನಾವಣೆಗಳಲ್ಲಿ ಮಾಧ್ಯಮಗಳ ಭಾಗವಹಿಸುವಿಕೆ ಬಹುಮುಖ್ಯ ಪಾತ್ರವಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದರು.

ಜಿಲ್ಲಾ ಪಂಚಾಯತ್‌ನ ನಜೀರ್‌ಸಾಬ್ (ಹಳೆಯ) ಸಭಾಂಗಣದಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಸ್ವೀಪ್ ಸಮಿತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಮಾಧ್ಯಮ ಪ್ರಮಾಣೀಕರಣ ಮತ್ತು ನಿಗಾ ಸಮಿತಿಯ ಕಾರ್ಯ ವಿಧಾನಗಳು (ಎಂಸಿಎಂಸಿ) ಹಾಗೂ ಕಾಸಿಗಾಗಿ ಸುದ್ದಿ (ಪೇಯ್ಡ್ ನ್ಯೂಸ್) ಕುರಿತಾಗಿ ಮಾಧ್ಯಮ ಪ್ರತಿನಿಧಿಗಳಿಗೆ ಹಮ್ಮಿಕೊಂಡಿದ್ದ ಕಾರ್ಯಾಗಾರದಲ್ಲಿ ಶುಕ್ರವಾರ ಮಾತನಾಡಿದರು.

ಈಗಾಗಲೇ ಲೋಕಸಭಾ ಸಾರ್ವತ್ರಿಕ ಚುನಾವಣೆ–2024 ಘೋಷಣೆಯಾಗಿದ್ದು, ಜಿಲ್ಲೆಯಲ್ಲಿ ಮೇ 7 ರಂದು ಮತದಾನ ನಡೆಯಲಿದೆ. ಚುನಾವಣೆ ಸಂದರ್ಭದಲ್ಲಿ ಮಾಧ್ಯಮಗಳ ಪಾತ್ರ ಮಹತ್ವದ್ದಾಗಿದ್ದು, ಮಾಧ್ಯಮಗಳು ಮತದಾರರಿಗೆ ಚುನಾವಣೆಯ ಕುರಿತು ಉಪಯುಕ್ತ ಮಾಹಿತಿ ನೀಡುವುದರ ಜೊತೆಗೆ ಮತದಾನದ ಪ್ರಾಮುಖ್ಯತೆಯನ್ನು ಸಾರ್ವಜನಿಕರಿಗೆ ಜಾಗೃತಿ ಮೂಡಿಸುವಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ತಿಳಿಸಿದರು.

ಚುನಾವಣೆಯ ಸಂದರ್ಭದಲ್ಲಿ ಮಾಧ್ಯಮಗಳು ವಸ್ತುನಿಷ್ಠ ಸುದ್ದಿಗಳಿಗೆ ಆದ್ಯತೆ ನೀಡಬೇಕು. ಟಿವಿ, ಕೇಬಲ್, ಪತ್ರಿಕೆಗಳಲ್ಲಿ ಭಿತ್ತರಗೊಳ್ಳುವ ರಾಜಕೀಯ ಜಾಹೀರಾತುಗಳಿಗೆ ಮಾಧ್ಯಮ ಪ್ರಮಾಣೀಕರಣ ಮತ್ತು ನಿಗಾ ಸಮಿತಿ (ಎಂಸಿಎಂಸಿ) ಯಿಂದ ಪೂರ್ವಾನುಮತಿ ಕಡ್ಡಾಯವಾಗಿದೆ ಎಂದು ಅವರು ಸ್ಪಷ್ಟಪಡಿಸಿದರು.



ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರಗೊಳ್ಳುವ ರಾಜಕೀಯ ಪಕ್ಷ, ವ್ಯಕ್ತಿಗಳ ಜಾಹೀರಾತುಗಳ ಮೇಲೂ ಎಂಸಿಎಂಸಿ ಸಮಿತಿಯು ನಿಗಾವಹಿಸಿದ್ದು, ಇವುಗಳಿಗೆ ಸಹ ಅನುಮತಿ ಪಡೆದುಕೊಳ್ಳಬೇಕು ಎಂದು ಅವರು ತಿಳಿಸಿದರು.

ಜಿಲ್ಲಾ ಸ್ವೀಪ್ ನೋಡೆಲ್ ಅಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಮಾತನಾಡಿ, ಪ್ರಜಾಪ್ರಭುತ್ವದಲ್ಲಿ ಮಾಧ್ಯಮವನ್ನು ನಾಲ್ಕನೇ ಅಂಗವೆಂದು ಪರಿಗಣಿಸಲಾಗುತ್ತದೆ. ಚುನಾವಣೆಯನ್ನು ವಿಶ್ವಾಸಾರ್ಹತೆ ಹಾಗೂ ಪಾರದರ್ಶಕತೆಯ ಪರಿಮಿತಿಯಲ್ಲಿ ನಡೆಸುವಲ್ಲಿ ಚುನಾವಣಾ ಮಾದರಿ ನೀತಿ ಸಂಹಿತೆ (ಎಂಸಿಸಿ) ಸಹ ಮುಖ್ಯ ಪಾತ್ರವಹಿಸುತ್ತದೆ. ಜಿಲ್ಲೆಯಲ್ಲಿ ಶೇಕಡವಾರು ಮತದಾನ ಪ್ರಮಾಣ ಹೆಚ್ಚಿಸಲು ಜಿಲ್ಲಾ ಸ್ವೀಪ್ ಸಮಿತಿಯಿಂದ ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಈ ಸಂಬಂಧ ಸ್ವೀಪ್ ಚಟುವಟಿಕೆ ಕಾರ್ಯಕ್ರಮಗಳಿಗೆ ಹೆಚ್ಚು ಪ್ರಚಾರ ನೀಡಬೇಕು ಎಂದು ಕೋರಿದರು.

ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್ ಮಾತನಾಡಿ, ಚುನಾವಣೆ ಮಾದರಿ ನೀತಿ ಸಂಹಿತೆ ಸಂದರ್ಭದಲ್ಲಿ ಮುದ್ರಣ ಮಾಧ್ಯಮಗಳಲ್ಲಿ ರಾಜಕೀಯ ಜಾಹೀರಾತು ಪ್ರಕಟಗೊಂಡಿದ್ದಲ್ಲಿ ಅದು ರಾಜಕೀಯ ಪಕ್ಷ ಅಥವಾ ಅಭ್ಯರ್ಥಿಯ ಅನುಮತಿ ಇದೆಯೇ ಎಂಬುದನ್ನು ವಿಚಾರಣೆ ನಡೆಸಲಾಗುತ್ತದೆ. ಇಲ್ಲದಿದ್ದರೆ, ಆ ಮಾಧ್ಯಮದ ಮೇಲೆ ಐಪಿಸಿ ಸೆಕ್ಷನ್ 171ಹೆಚ್ ಉಲ್ಲಂಘನೆಯಾಗಿದೆ ಎಂದು ಪರಿಗಣಿಸಲಾಗುತ್ತದೆ ಎಂದು ತಿಳಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ತುಕಾರಾಂ ರಾವ್ ಬಿ.ವಿ ಅವರು ಮಾಧ್ಯಮ ಪ್ರಮಾಣೀಕರಣ ಮತ್ತು ನಿಗಾ ಸಮಿತಿಯ ಕಾರ್ಯ ವಿಧಾನಗಳು (ಎಂಸಿಎಂಸಿ) ಹಾಗೂ ಕಾಸಿಗಾಗಿ ಸುದ್ದಿ (ಪೇಯ್ಡ್ ನ್ಯೂಸ್) ಕುರಿತಾಗಿ ಕಾರ್ಯಗಾರದಲ್ಲಿ ವಿಶ್ಲೇಷಿಸಿ ಮಾತನಾಡಿ, ಮಾಧ್ಯಮ ಪ್ರಮಾಣೀಕರಣ ಮೇಲುಸ್ತುವಾರಿ ಸಮಿತಿಯಲ್ಲಿ (ಎಂಸಿಎಂಸಿ) ಟಿವಿ, ಚಾನೆಲ್, ಸಾಮಾಜಿಕ ಜಾಲತಾಣಗಳಲ್ಲಿ ಬರುವ ಜಾಹೀರಾತನ್ನು ಪ್ರಮಾಣಿಸಿ ಪ್ರಸಾರಕ್ಕೆ ಅನುಮತಿ ನೀಡಲಾಗುತ್ತದೆ ಎಂದು ಹೇಳಿದರು. ಕಾಸಿಗಾಗಿ ಸುದ್ದಿ (Paid News) ಮೇಲೂ ಎಂಸಿಎಂಸಿ ಸಮಿತಿಯು ನಿಗಾವಹಿಸಿದ್ದು, ಇವು ವರದಿಯಾದರೆ ಜಿಲ್ಲಾ ಚುನಾವಣಾಧಿಕಾರಿಗಳು ಸಂಬಂಧಿಸಿದ ಅಭ್ಯರ್ಥಿಗಳಿಗೆ ನೋಟೀಸ್ ಜಾರಿ ಮಾಡುತ್ತಾರೆ ಎಂದು ತಿಳಿಸಿದರು.

ಚುನಾವಣೆಗೆ ಮುದ್ರಣಗೊಳ್ಳುವ ಕರಪತ್ರ, ಕಾಸಿಗಾಗಿ ಸುದ್ದಿ, ಸುಳ್ಳುಸುದ್ದಿ, ಜಾತಿ ಕೋಮುವಾದ ಪ್ರಚೋದಿಸುವ ಇತ್ಯಾದಿ ಸುದ್ದಿಗಳ ಮೇಲೆ ಎಂಸಿಎಂಸಿ ಸಮಿತಿಯು ಹದ್ದಿನ ಕಣ್ಣಿಟ್ಟಿದೆ. ಇದನ್ನು ಹಬ್ಬಿಸುವುದು ಕೂಡ ಕಾನೂನು ಬಾಹಿರ ಎಂದು ಪರಿಗಣಿಸಲಾಗುತ್ತದೆ ಎಂದರು. ಈ ಸಂದರ್ಭದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಿಬ್ಬಂದಿಗಳು, ಮಾಧ್ಯಮ ಪ್ರತಿನಿಧಿಗಳು ಹಾಗೂ ಇತರರು ಉಪಸ್ಥಿತರಿದ್ದರು.

# ನದಿಯ ಅನಧಿಕೃತ ಮರಳು ಸಾಗಾಣಿಕೆದಾರರಿಗೆ ಎಚ್ಚರಿಕೆ

**■ ಹಂಪಿ ಟೈಮ್ಸ್ ಕೊಪ್ಪಳ**


ಕೊಪ್ಪಳ ತಾಲ್ಲೂಕಿನ ಅಳವಂಡಿ ಹೋಬಳಿಯ ಕೇಸಲಾಪುರ, ಹಲವಾಗಲಿ, ನಿಲೋಗಿಪುರ, ಹಳೇನಿಲೋಗಿಪುರ ಮತ್ತು ತಿಗರಿ ಗ್ರಾಮ ವ್ಯಾಪ್ತಿಯ ತುಂಗಾಭದ್ರಾ ನದಿಯಲ್ಲಿ ಬೇಸಿಗೆ ನಿಮಿತ್ತ ನೀರಿನ ಹರಿವು ಕಡಿಮೆಯಾಗಿದ್ದು, ಮರಳಿನ ಸಂಚಯವಾಗಿದೆ. ನದಿ ಪಾತ್ರ ಮತ್ತು ತುಂಗಾಭದ್ರಾ ಜಲಾಶಯದ ಹಿನ್ನೀರಿನ ಪ್ರದೇಶದಲ್ಲಿ (Project Area) ಅನಧಿಕೃತವಾಗಿ ಮರಳು ಗಣಿಗಾರಿಕೆ ಮತ್ತು ಸಾಗಾಣಿಕೆ ನಡೆಯುತ್ತಿದ್ದು, ಈ ಬಗ್ಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ವತಿಯಿಂದ ನಿರಂತರ ಗಸ್ತು ಪಹರೆ ನಡೆಸಿ ವಶಪಡಿಸಿಕೊಳ್ಳಲಾಗಿದ್ದು, ಮರಳಿನ ದಾಸ್ತಾನನ್ನು ವಿಲೇವಾರಿ ಮಾಡಲಾಗುತ್ತಿದೆ.

ಮೇಲ್ಕಂಡ ಗ್ರಾಮಗಳ ಜನರು ರಾತ್ರಿ ವೇಳೆ ಏಕಾಏಕಿ ಸುಮಾರು 150 ರಿಂದ 200 ಟ್ರಾಕ್ಟರ್‌ಗಳಲ್ಲಿ ನದಿ ಮರಳನ್ನು ಎತ್ತುವಳಿ ಮಾಡಿ ಸಾಗಾಣಿಕೆ ಮಾಡಲು ಯತ್ನಿಸುತ್ತಿರುವುದು ಕಂಡುಬಂದಿದ್ದು, ಈ ಕೃತ್ಯವು ಕಾನೂನು ಬಾಹಿರವಾಗಿದ್ದು, ನಿಯಂತ್ರಣಗೊಳಿಸಲು ಕಷ್ಟಸಾಧ್ಯವಾಗುತ್ತಿದ್ದು ಕಾನೂನು ಸುವ್ಯವಸ್ಥೆಗೂ ಭಂಗವಾಗುತ್ತಿದೆ.

ಆದ್ದರಿಂದ ಅಳವಂಡಿ ಹೋಬಳಿಯ ಕೇಸಲಾಪುರ, ಹಲವಾಗಲಿ, ನಿಲೋಗಿಪುರ, ಹಳೇನಿಲೋಗಿಪುರ ಮತ್ತು ತಿಗರಿ ಗ್ರಾಮಗಳ ಗ್ರಾಮಸ್ಥರು ಅನಧಿಕೃತ ಮರಳು ಎತ್ತುವಳಿ ಮತ್ತು ಸಾಗಾಣಿಕೆ ಚಟುವಟಿಕೆ ಯತ್ನಗಳನ್ನು ಈ ಕೂಡಲೇ ಕೈಬಿಡಬೇಕು. ತಪ್ಪಿದಲ್ಲಿ ಟ್ರಾಕ್ಟರ್ ವಾಹನಗಳ ಮಾಲೀಕರು ಮತ್ತು ಚಾಲಕರ ವಿರುದ್ಧ ಜಿಲ್ಲಾ ಮರಳು ಉಸ್ತುವಾರಿ ಸಮಿತಿ/ ತಾಲೂಕು ಮರಳು ಉಸ್ತುವಾರಿ ಸಮಿತಿ ಹಾಗೂ ಗ್ರಾಮ ಖನಿಜ ಉಸ್ತುವಾರಿ ಸಮಿತಿಗಳ ಸದಸ್ಯ ಇಲಾಖೆಗಳ ಸಕ್ಷಮ ಅಧಿಕಾರಿಗಳ ಸಹಯೋಗದಲ್ಲಿ ದಂಡ ವಿಧಿಸಿ/ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಕಾನೂನು ರೀತ್ಯ ಕ್ರಮ ಜರುಗಿಸಲಾಗುವುದು ಎಂದು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಿಲ್ಲಾ ಕ್ರೀಡಾಂಗಣದಲ್ಲಿನ ಈಜುಕೊಳ ಬಳಕೆಗೆ ಸಿದ್ಧ

### ಆಜೀವ ಸದಸ್ಯತ್ವಕ್ಕೆ ರೂ.2000, ಪ್ರತಿ ಒಂದು ತಾಸಿಗೆ ರೂ.100 ಶುಲ್ಕ



**■ ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿರುವ ಏಕೈಕ ಸುಸಜ್ಜಿತವಾದ ಈಜುಕೊಳವು ಕಾರ್ಯಾರಂಭವಾಗಿದ್ದು, ಈಜುಕೊಳವು ಇಬ್ಬರು ತರಬೇತುದಾರರು, ಇಬ್ಬರು ಲೈಫ್ ಗಾರ್ಡ್ ಹಾಗೂ ಈಜುಕೊಳಕ್ಕೆ ಬರುವಂತಹ ಸಾರ್ವಜನಿಕರಿಗೆ ಸುಸಜ್ಜಿತ ಡ್ರೆಸಿಂಗ್ ರೂಮ್, ಶೌಚಾಲಯಗಳ ಕೊಠಡಿ ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ಹೊಂದಿದೆ.

ಪ್ರತಿ 03 ತಿಂಗಳಿಗೊಮ್ಮೆ ಸಂಪೂರ್ಣವಾಗಿ ನೀರನ್ನು ತೆಗೆದು ಹೊಸ ನೀರನ್ನು ಬಳಕೆ ಮಾಡಲಾಗುತ್ತಿದ್ದು, ಈಜುಕೊಳದ ನೀರನ್ನು ಪ್ರತಿದಿನ ಫಿಲ್ಟ್ರೇಶನ್ ಮಾಡಿ ನೀರು ಶುದ್ಧೀಕರಿಸಲಾಗುತ್ತಿದೆ. ಸಾರ್ವಜನಿಕರು ಈಗಾಗಲೇ ಇದರ ಸದುಪಯೋಗ ಪಡೆದುಕೊಳ್ಳುತ್ತಿದ್ದು, ಸಾರ್ವಜನಿಕರಿಗೆ ಈಜುಕೊಳ ತರಬೇತುದಾರರಿಂದ ತರಬೇತಿ ನೀಡಲಾಗುವುದು. ಈಜುಕೊಳಕ್ಕೆ ಪ್ರತಿದಿನ ಬೆಳಗ್ಗೆ 06 ರಿಂದ ಸಂಜೆ 4.30 ರವರೆಗೆ ಸಾರ್ವಜನಿಕರಿಗೆ ಹಾಗೂ ಸಂಜೆ 5 ರಿಂದ 6 ರವರೆಗೆ ಮಹಿಳೆಯರಿಗೆ ಅವಕಾಶ ಕಲ್ಪಿಸಲಾಗಿದೆ. ಈಜುಕೊಳ ಸದಸ್ಯತ್ವಕ್ಕೆ ಶುಲ್ಕವನ್ನು ನಿಗದಿಪಡಿಸಲಾಗಿದ್ದು, ಆಜೀವ ಸದಸ್ಯತ್ವಕ್ಕೆ ರೂ.2000/, ಮಾಸಿಕ ರೂ.1500/–, 12 ವರ್ಷದೊಳಗಿನವರಿಗೆ ರೂ.2000/–, ಮಾಸಿಕ ರೂ.750/–, ಸಾರ್ವಜನಿಕರಿಗೆ ಪ್ರತಿ ಒಂದು ತಾಸಿಗೆ ರೂ.100/– ಗಳ ಶುಲ್ಕವನ್ನು ನಿಗದಿಪಡಿಸಿದೆ. ಸಾರ್ವಜನಿಕರು ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮತದಾನಪ್ರಜೆಗಳವಿಶೇಷಅಧಿಕಾರ




**■ ಹಂಪಿ ಟೈಮ್ಸ್ ರಾಯಚೂರು**

ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಮತದಾನವೆಂಬುವುದು ಪ್ರಜೆಗಳಿಗೆ ನೀಡಿದ ವಿಶೇಷ ಅಧಿಕಾರವಾಗಿದ್ದು, ಮತದಾನ ಪ್ರತಿಯೊಬ್ಬರ ಹಕ್ಕು ಮತ್ತು ಕರ್ತವ್ಯವಾಗಿದೆ ಎಂದು ಎನ್.ಆರ್.ಎಲ್.ಎಮ್ ತಾಲೂಕು ಕಾರ್ಯಕ್ರಮ ವ್ಯವಸ್ಥಾಪಕ ಶಿವರಾಜ್ ರವರು ಹೇಳಿದರು.

ಅವರು ಗುರುವಾರ ಜಿಲ್ಲೆಯ ಮಾನವಿ ತಾಲೂಕಿನ ಹಿರೆಕೊಟ್ನೆಕಲ್ ಗ್ರಾಮ ಪಂಚಾಯಿತಿ ಆವರಣದಲ್ಲಿ ತಾಲೂಕು ಪಂಚಾಯತ್, ತಾಲೂಕು ಸ್ವೀಪ್ ಸಮಿತಿ, ಸಂಜೀವಿನಿ – ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂವರ್ಧನಾ ಸಂಸ್ಥೆ ಹಾಗೂ ಗ್ರಾಮ ಪಂಚಾಯತ್ ವತಿಯಿಂದ ಮತದಾನ ಜಾಗೃತಿ ಅಭಿಯಾನದಲ್ಲಿ ಭಾಗವಹಿಸಿ ಮಾತನಾಡಿದರು.

ಮತದಾನ ಮಾಡುವುದು ಶ್ರೇಷ್ಠ ಕಾರ್ಯವಾಗಿದ್ದು, ಅದರಲ್ಲೂ ಮುಖ್ಯವಾಗಿ ಸ್ವಸಹಾಯ ಗುಂಪಿನ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡಲು ಮುಂದಾಗಬೇಕು. ಮೇ.7ರಂದು ನಡೆಯುವ ಸಾರ್ವತ್ರಿಕ ಲೋಕಸಭೆ ಚುನಾವಣೆಯಲ್ಲಿ ಪ್ರತಿಯೊಬ್ಬರು ಮತದಾನ ಮಾಡುವ ಮೂಲಕ ತಮ್ಮ ಅಧಿಕಾರ ಹಾಗೂ ಕರ್ತವ್ಯವನ್ನು ಪಾಲಿಸಲು ಮುಂದಾಗಬೇಕು ಎಂದು ತಿಳಿಸಿದರು.

ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಮತದಾನವೆಂಬುವುದು ಪ್ರಜೆಗಳಿಗೆ ನೀಡಿದ ವಿಶೇಷ ಅಧಿಕಾರವಾಗಿದ್ದು, ಮತದಾನ ಪ್ರತಿಯೊಬ್ಬರ ಹಕ್ಕು ಮತ್ತು ಕರ್ತವ್ಯವಾಗಿದೆ. ದೇಶದ ಪ್ರತಿಯೊಬ್ಬರ ನಾಗರೀಕರು ಮತದಾನ ಮಾಡಿದಾಗ ದೇಶದ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದರು. ಇದೇ ವೇಳೆ ಎಲ್ಲರಿಗೂ ಪ್ರತಿಜ್ಞಾ ವಿಧಿಯನ್ನು ಭೋದಿಸಲಾಯಿತು.

ಈ ಸಂದರ್ಭದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನಾಗಭೂಷಣ, ಯುವ ವೃತ್ತಿಪರ ಖಾಸಿಂ, ವಲಯ ಮೇಲ್ವಿಚಾರಕರಾದ ಸೂರತ್ ಪ್ರಸಾದ್ ಗಟ್ಟು, ಶರಣು ಬಸವ, ಅಂಗನವಾಡಿ ಕಾರ್ಯಕರ್ತೆಯರು,ಆಶಾ ಕಾರ್ಯಕರ್ತೆಯರು, ಒಕ್ಕೂಟದ ಸಿಬ್ಬಂದಿಗಳು, ಸ್ವ ಸಹಾಯ ಗುಂಪಿನ ಮಹಿಳೆಯರು ಭಾಗವಹಿಸಿದ್ದರು.

# ಮಾದೂರಲ್ಲಿ ಮತದಾನ ಜನಜಾಗೃತಿ




**■ ಹಂಪಿ ಟೈಮ್ಸ್, ಹಗರಿಬೊಮ್ಮನಹಳ್ಳಿ**

ತಾಲೂಕಿನ ಮಾದೂರು ಗ್ರಾ.ಪಂ.ವತಿಯಿಂದ ಮಾದೂರಿನಲ್ಲಿ ಮೇ.07ರಂದು ನಡೆಯಲಿರುವ ಲೋಕಸಾಭಾ ಚುನಾವಣೆಯ ಹಿನ್ನೆಲೆಯಲ್ಲಿ, ಮತದಾನ ಜಾಗೃತಿ ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು.

ಮತದಾನ ಪ್ರಜೆಗಳ ಅಧಿಕಾರ. ಅಧಿಕಾರ ಚಲಾಯಿಸುವ ಸುವರ್ಣಾವಕಾಶ ಪ್ರಜೆಗಳಿಗಿದೆ ಎಂದು ಜಾಗೃತಿ ಮೂಡಿಸಿದರು. ಈ ವೇಳೆ ಗ್ರಾ.ಪಂ.ಸಿಬ್ಬಂದಿಗಳಾದ ಸಿ.ಎಂ. ಮಹೇಶ್ವರ, ತಿಮ್ಮಪ್ಪ, ಅಂಗನವಾಡಿ ಕಾರ್ಯಕರ್ತೆ ಮಾಲತಿ, ಪಾರ್ವತಿ, ಗ್ರಾಮದ ಕಂಠಿ ಶರಣಪ್ಪ, ವೆಂಕಟೇಶ, ಮಂಜುನಾಥ, ಮಹಾಂತೇಶ, ರಮೇಶ, ಪರಮೇಶಪ್ಪ ಮತ್ತಿತರರು ಇದ್ದರು.


ಸಾವಯವ ಪದ್ಧತಿಯಲ್ಲಿ ಬೆಳೆದ ಗುಣಮಟ್ಟದ ತೆಂಗಿನಕಾಯಿ, ಬಾಳೆ ಹಣ್ಣು, ತಾಜಾ ನುಗ್ಗೆಕಾಯಿ ಮತ್ತು ನುಗ್ಗೆ ಸೊಪ್ಪಿಗಾಗಿ ಸಂಪರ್ಕಿಸಿರಿ
Organic Coconut & Banana, Moringa oleifera Available in best Price
98458 65204 ಮೃತ್ಯುಂಜಯನಗರ, ಹೊಸಪೇಟೆ

## ನಿತ್ಯ ಪಂಚಾಂಗ

ಮಾಸ: ಪಾಲ್ಗುಣ । ಸಂವತ್ಸರ: ಶೋಭಾಕೃತ

**30–03–2024 – ಶನಿವಾರ**

| | |
|---|---|
| ತಿಥಿ | : ಪಂಚಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಅನುರಾಧ |
| ಯೋಗ | : ವಜ್ರಸಿದ್ಧಿ |
| ಕರಣ | : ಕೌಳವ |
| ಸೂರ್ಯೋದಯ | : 06:22:09 |
| ಸೂರ್ಯಾಸ್ತ | : 18:40:37 |
| ರಾಹು | : 09:27–10:59 |
| ಯಮಘಂಡ | : 14:04–15:36 |
| ಗುಳಿಕ | : 06:22–07:54 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 29–03–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1581.01 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 848 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 4.980 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1587.63 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 6774 ಕ್ಯುಸೆಕ್ |
| ಸಾಮರ್ಥ್ಯ | 9.165 ಟಿಎಂಸಿ |

## ನಾಗರತ್ನಮ್ಮ ನಿಧನ



**ಹೊಸಪೇಟೆ:** ಬಿಜೆಪಿ ಜಿಲ್ಲಾ ಅಧ್ಯಕ್ಷ ಚನ್ನಬಸವನಗೌಡ ಪಾಟೀಲ್ ಅವರ ತಾಯಿ ಶ್ರೀಮತಿ ನಾಗ ರತ್ನಮ್ಮ ಶಿವಕುಮಾರ ಗೌಡ ಪಾಟೀಲ್(68) ಇವರು ಸ್ವಗ್ರಾಮ ಕೊಟ್ಟೂರು ತಾಲೂಕಿನ ತಿಮ್ಮಲಾಪುರ ಗ್ರಾಮದಲ್ಲಿ ಶುಕ್ರವಾರ ಮಧ್ಯಾಹ್ನ ನಿಧನರಾಗಿದ್ದಾರೆ.

ಮೃತರಿಗೆ ಚನ್ನಬಸವನಗೌಡ ಪಾಟೀಲ್ ಸೇರಿ ಐವರು ಮಕ್ಕಳು ಹಾಗೂ ಬಂಧು ಬಳಗದವರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಕೊಟ್ಟೂರು ತಾಲ್ಲೂಕಿನ ತಿಮ್ಮಲಾಪುರ ಗ್ರಾಮದಲ್ಲಿ ಮಾ.30 ಶನಿವಾರ ಮಧ್ಯಾಹ್ನ ಜರುಗಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ. ಡಿ..ವಿ.ಜಿ.

# ಉಚ್ಚಂಗಿದುರ್ಗ ಅಡವಿ ಹಾಲಮ್ಮ ದೇವಸ್ಥಾನ ಮುಜರಾಯಿ ಇಲಾಖೆ ಸೇರ್ಪಡೆಗೆ ವಿರೋಧ

**ಹಂಪಿ ಟೈಮ್ಸ್ ಹರಪನಹಳ್ಳಿ**

ತಾಲೂಕಿನ ಉಚ್ಚಂಗಿದುರ್ಗದ ಅಡವಿ ಹಾಲಮ್ಮ ದೇವಸ್ಥಾನವನ್ನು ಮುಜರಾಯಿ ಇಲಾಖೆಗೆ ಸೇರಿಸಲು ಇಲಾಖೆಯ ಅಧಿಕಾರಿಗಳು ಶುಕ್ರವಾರ ಸ್ಥಳಕ್ಕೆ ಆಗಮಿಸಿದಾಗ ಸಾರ್ವಜನಿಕರು ವಿರೋಧಿಸಿ ಪ್ರತಿಭಟನೆ ನಡೆಸಿದರು.

ಹಿಂದು ಧಾರ್ಮಿಕ ದತ್ತಿ ಇಲಾಖೆಯ ಸಹಾಯಕ ಆಯುಕ್ತರಾದ ಗಂಗಾಧರಪ್ಪ ಮಾತನಾಡಿ, ಜಿಲ್ಲಾಧಿಕಾರಿಗಳ ಆದೇಶದಂತೆ ಹಾಲಮ್ಮನ ತೋಪಿನಲ್ಲಿರುವ ದೇವಸ್ಥಾನವನ್ನು ಮುಜರಾಯಿ ಇಲಾಖೆಗೆ ಸೇರಿಸಿಕೊಂಡು, ಅಭಿವೃದ್ಧಿ ಮಾಡಲು ಭಕ್ತರಿಗೆ ಅನುಕೂಲವಾಗಲಿದೆ. ಗುಡ್ಡದ ಮೇಲೆ ಭಾರತೀಯ ಪುರತತ್ವ ಇಲಾಖೆಯವರು ಅವಕಾಶ ನೀಡುತ್ತಿಲ್ಲ. ಆದಕಾರಣ ಅಭಿವೃದ್ಧಿ ಪಡಿಸಲು ವಿಳಂಬವಾಗುತ್ತಿದೆ. ಮೂಲಭೂತ ಸೌಕರ್ಯ ಒದಗಿಸಲು ಆಗುತ್ತಿಲ್ಲ. ದೇವಸ್ಥಾನದವತಿಯಿಂದ 8 ಕೋಟಿ ಅನುದಾನವಿದ್ದು ಭಕ್ತರಿಗೆ ಮೂಲಭೂತ ಸೌಕರ್ಯ ಒದಗಿಸಲು ಇಲ್ಲಿ ಅವಕಾಶವಿದೆ. ಹಾಗೂ ಅಭಿವೃದ್ಧಿ ಪಡಿಸಲು ಈ ದೇವಸ್ಥಾನವನ್ನು ಮುಜರಾಯಿ ಇಲಾಖೆಗೆ ಸೇರಿಸಲು ಜಿಲ್ಲಾಧಿಕಾರಿಗಳು ಆದೇಶ ನೀಡಿದ್ದಾರೆ ಎಂದು ಹೇಳಿದರು.



ಮೊದಲು ಗುಡ್ಡದ ಮೇಲಿರುವ ದೇವಸ್ಥಾನಕ್ಕೆ ಹೋಗಲು ಭಕ್ತರಿಗೆ ಅನುಕೂಲವಾಗಲು ರಸ್ತೆ ಅಗಲೀಕರಣ ಮಾಡಬೇಕು ಮತ್ತು ಫ್ಲೈ ಓವರ್ ವ್ಯವಸ್ಥೆ ಆಗಬೇಕು. ಸ್ವಚ್ಛತೆ, ಶೌಚಾಲಯ, ಸ್ನಾನದ ಗೃಹಗಳು, ವಸತಿ ಗೃಹಗಳನ್ನು ಮಾಡಬೇಕು. ಅದನ್ನು ಬಿಟ್ಟು ತೋಪಿನಲ್ಲಿರುವ ದೇವಸ್ಥಾನವನ್ನು ಗ್ರಾಮ ಪಂಚಾಯಿತಿ ಹಾಗೂ ಸಾರ್ವಜನಿಕರಿಂದ ಅಭಿವೃದ್ಧಿ ಪಡಿಸಿದ್ದೇವೆ. ಸರ್ಕಾರದ ಆದೇಶವನ್ನು ಕಮಿಟಿಯವರಿಗೆ ಕೊಡಬೇಕು, ತದ ನಂತರ ಸಾರ್ವಜನಿಕರೆಲ್ಲಾ ಸೇರಿ ಇಲ್ಲಿ ಯಾವುದೇ ಮೂಲಭೂತ ಸೌಕರ್ಯ ಒದಗಿಸದೇ ಮುಜರಾಯಿ ಇಲಾಖೆಗೆ ಸೇರಿಸಲು ಬಿಡುವುದಿಲ್ಲ. ಇಪತ್ತು ವರ್ಷವಾದರೂ ಅಭಿವೃದ್ಧಿ ಪಡಿಸದೇ ಇರುವ ಇಲಾಖೆಯವರು ಈಗ ಅಭಿವೃದ್ಧಿ ಪಡಿಸಲು ಬಂದಿದ್ದಾರೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

ಯುಗಾದಿ ಹಬ್ಬವಾದ ನಂತರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮುಂದಿನ ದಿನಗಳಲ್ಲಿ ನಿರ್ಧರಿಸಲಾಗುವುದು ಎಂದು ಮುಜರಾಯಿ ಇಲಾಖೆಯ ಅಧಿಕಾರಿಗಳು ಹೇಳಿದ ಮೇಲೆ ಸಾರ್ವಜನಿಕರು, ಕಮಿಟಿಯವರು ಹಾಗೂ ಪಂಚಾಯಿತಿಯವರು ಪ್ರತಿಭಟನೆಯಿಂದ ಸರಿದು ವಾಪಾಸ್ ಹೋದರು.

ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಇದೇ ಸಂದರ್ಭದಲ್ಲಿ ಸಿಪಿಐ. ಸಾಬಯ್ಯ, ಪಿಎಸ್ಐ. ಕೆ. ರಂಗಯ್ಯ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶಿಲ್ಪಾ ಉಮೇಶ್ ನಾಯ್ಕ್, ಉಪಾಧ್ಯಕ್ಷ ಕೆಂಚಪ್ಪ, ಮುಖಂಡರಾದ ಕಮಲವ್ವರ ಹನುಮಂತಪ್ಪ, ಸಿದ್ದಣ್ಣ, ಹಾಲೇಶ್, ಕಮಿಟಿ ಅಧ್ಯಕ್ಷ ಕಟಿಗಿ ಪರುಶುರಾಮಪ್ಪ, ಭರಮಣ್ಣ, ದಾನೇಶ್, ಕೆಂಚಪ್ಪ, ಕಾಳಮ್ಮ, ಕಾರ್ಯನಿರ್ವಾಹಣಾಧಿಕಾರಿ ಹೆಚ್.ಮಲ್ಲಪ್ಪ,ಶಾಂತಮ್ಮ ಕಾರ್ಯನಿರ್ವಾಹಣಾಧಿಕಾರಿ ಮೈಲಾರ ಹಾಗೂ ಹಂಪಿ ದೇವಸ್ಥಾನ ಇಒ ಹನುಮಂತಪ್ಪ ಹಾಜರಿದ್ದರು.

# ಶ್ರೀಹಾಲಸ್ವಾಮಿ ಮಠ ಜೀರ್ಣೋದ್ಧಾರಕ್ಕೆ ಧರ್ಮಸ್ಥಳ ಗ್ರಾಮಾಭಿವೃದ್ಧಿಯಿಂದ ಧನಸಹಾಯ

## ಮಠದ ಶ್ರೀ ಹಾಲಸಿದ್ದೇಶ್ವರ ಸ್ವಾಮೀಜಿಗೆ 3ಲಕ್ಷ ರೂ.ಗಳ ಚೆಕ್ ವಿತರಣೆ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಪಟ್ಟಣದ ಶ್ರೀ ಹಾಲಸ್ವಾಮಿ ಮಠದ ಜೀರ್ಣೋದ್ಧಾರಕ್ಕೆ ಮಠದ ವತಿಯಿಂದ ಸಲ್ಲಿಸಲಾದ ಮನವಿಗೆ, ಸ್ಪಂಧಿಸಿರುವ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಭಿವೃದ್ಧಿ ಸಂಘದ ಯೋಜನೆಯಿಂದ ಮೂರು ಲಕ್ಷ ರೂ.ಗಳ ಚೆಕ್‌ನ್ನು ಮಠದ ಹಾಲಸಿದ್ಧೇಶ್ವರ ಸ್ವಾಮೀಜಿಯವರಿಗೆ ವಿತರಿಸಲಾಯಿತು.

ಹಾಲಸಿದ್ದೇಶ್ವರ ಸ್ವಾಮೀಜಿ ಚೆಕ್ ಸ್ವೀಕರಿಸಿ ಮಾತನಾಡಿದರು. ಮಠ ಪಟ್ಟಣದ ಹೃದಯ ಭಾಗದಲ್ಲಿದ್ದು, ಸಾರ್ವಜನಿಕರ ಉಪಯೋಗವಾಗಿದೆ. ಮಠದಲ್ಲಿ ವರ್ಷ ಪೂರ್ತಿ ಸಾಕಷ್ಟು ಧಾರ್ಮಿಕ ಕಾರ್ಯಕ್ರಮಗಳು, ಉಚಿತ ಸಾಮೂಹಿಕ ವಿವಾಹಗಳು ಜರುಗುತ್ತಿದ್ದವು. ಆದರೆ, ಮಠದ ಅಭಿವೃದ್ಧಿ ಕೆಲಸಗಳಲ್ಲಿ ಸಂಪೂರ್ಣ ಹಿಂದುಳಿದಿದ್ದು, ಈ ಬಗ್ಗೆ ಡಾ.ವೀರೇಂದ್ರ ಹೆಗ್ಗಡೆಯವರ ನೇತೃತ್ವದ ಶ್ರೀಧರ್ಮಸ್ಥಳ ಗ್ರಾಮ ಅಭಿವೃದ್ಧಿ ಸಂಘಕ್ಕೆ ಮಠದಿಂದ ಸಲ್ಲಿಸಲಾದ ಮನವಿಗೆ ಸ್ಪಂಧಿಸುರುವ ಶ್ರೀಗಳು ಶ್ರೀಮಠದ ಕಾರ್ಯಗಳ ಜೀರ್ಣೋದ್ಧಾರಕ್ಕೆ ಧನ ಸಹಾಯ ಮಾಡಿದ್ದಾರೆ. ಮಠದವತಿಯಿಂದ ಅವರಿಗೆ ಅಭಿನಂದನೆಗಳನ್ನು ತಿಳಿಸುತ್ತಾ. ಸದಾ ಸಮಾಜದ ಕಾರ್ಯಗಳಲ್ಲಿ ತೊಡಗಿಕೊಂಡಿರುವ ಶ್ರೀಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ಯೋಜನೆಗಳು ಜನಪರವಾದ ಯೋಜನೆಗಳಾಗಿವೆ. ಸಮಾಜದ ಒಳಿತಿಗಾಗಿ ಡಾ.ವೀರೇಂದ್ರ ಹೆಗ್ಗಡೆಯವರ ನಿರ್ದೇಶನ ಮತ್ತು ಸಾರ್ವಜನಿಕ ಮುಂಜಾಗ್ರತೆ ಕ್ರಮ ನೋಡುತ್ತಿದ್ದರೆ ಶ್ಲಾಘನೀಯ ಎಂದರು.



ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದ ವಿಜಯನಗರ ಜಿಲ್ಲಾ ನಿರ್ದೇಶಕರಾದ ಸತೀಶ್ ಶೆಟ್ಟಿಯವರು ಚೆಕ್ ವಿತರಿಸಿ, ಇದು ಅತ್ಯಂತ ಸಮಾಜದ ಕಾಳಜಿಯ ಹಿನ್ನೆಲೆಯಲ್ಲಿ ನೀಡಲಾಗುತ್ತಿರುವ ಮೊತ್ತವಾಗಿದ್ದು, ಮಠದ ಅಭಿವೃದ್ಧಿ ಕೆಲಸಗಳು ಜರುಗಲಿ, ಧರ್ಮಸ್ಥಳ ಶ್ರೀಗಳ ಆಶಯಗಳು ನೆರವೇರಲಿ ಎಂದು ಆಶಿಸಿದರು.

ಈ ವೇಳೆ ತಾಲೂಕು ಯೋಜನಾಧಿಕಾರಿ ವಾಣಿ, ವಲಯ ಮೇಲ್ವಿಚಾರಕರಾದ ಮಂಜುಳಾ, ಯಶೋಧ, ಪುಸಸಭೆ ಸದಸ್ಯ ದೀಪಕ್ ಕಠಾರೆ, ಶ್ರೀಹಾಲಸ್ವಾಮಿ ಮಠದ ಟ್ರಸ್ಟ್‌ನ ಸದಸ್ಯರಾದ ಖಾನಾವಳಿ ಬಸವರಾಜಪ್ಪ, ಉಮಾಪತಿ ಸ್ವಾಮಿ, ಜೆಜೆ ನಗರದ ದುರ್ಗಾಂಭಿಕಾ ದೇಗುಲದ ಅರ್ಚಕರಾದ ವಿ.ಹನುಮಂತಪ್ಪ, ನಾಗಯ್ಯ, ಎಂ.ಹನುಮಂತಪ್ಪ ಹಾಗೂ ಭದ್ರವಾಡಿ ಶಿವು ಮತ್ತಿತರರು ಇದ್ದರು.

# ಮಾ.30, 31 ರಂದು ಶ್ರೀಮದ್ಭಾಗವತದ ಪಾರಾಯಣ, ಹರಿಕಥಾಮೃತ, ಪ್ರವಚನ

**ಹಂಪಿ ಟೈಮ್ಸ್ ಹೊಸಪೇಟೆ:**

ವಿಶ್ವಮಧ್ವ ಮಹಾಪರಿಷತ್ ಅಂಗಸಂಸ್ಥೆಯಾದ ಸೌರಭ ದಾಸ ಸಾಹಿತ್ಯ ವಿದ್ಯಾಲಯ ವತಿಯಿಂದ ಶ್ರೀ ವ್ಯಾಸರಾಜರು ಹಾಗೂ ಶ್ರೀ ವಾದಿರಾಜ ಶ್ರೀಪಾದಂಗಳವರ ಆರಾಧನಾ ಪರ್ವಕಾಲ ಪ್ರಯುಕ್ತ ಹೊಸಪೇಟೆಯ ಶ್ರೀ ಉತ್ತರಾದಿ ಮಠದಲ್ಲಿ ಮಾಚ್9 30 ಮತ್ತು 31 ರಂದು ವಿದ್ಯಾಲಯದ 16 ಜನ ವಿದ್ವಾಂಸರಿಂದ ಶ್ರೀಮದ್ಭಾಗವತದ ಪಾರಾಯಣ ಹಮ್ಮಿಕೊಳ್ಳಲಾಗಿದೆ. ಎರಡು ದಿನದಲ್ಲಿ ಬೆಳಿಗ್ಗೆ 7:00 ಗಂಟೆಯಿಂದ ರಾತ್ರಿ 11:00 ಗಂಟೆಗಳ ವರೆಗೆ ಪಾರಾಯಣ ಹಾಗೂ ಸಮಗ್ರ ಹರಿಕಥಾಮೃತಸಾರದ ಪಾಠ ಮತ್ತು ಪ್ರವಚನ ಜರುಗಲಿದೆ ಎಂದು ಸೌರಭ ದಾಸಸಾಹಿತ್ಯ ವಿದ್ಯಾಲಯ ಅಧ್ಯಕ್ಷ ಪ್ರಮೋದಾಚಾರ್ಯ ಪೂಜಾರ ತಿಳಿಸಿದ್ದಾರೆ.

# ಅಗತ್ಯ ಸೇವೆಯಲ್ಲಿರುವವರಿಗೆ ಅಂಚೆ ಮತದಾನ ಅವಕಾಶ

**ಮೊದಲ ಪುಟದಿಂದ**

ಲೋಕಸಭಾ ಚುನಾವಣೆ 2024ರ ಸಂಬಂಧ ಮಾಧ್ಯಮಗಳಲ್ಲಿ ಪ್ರಕಟವಾಗುವ ಕಾಸಿಗಾಗಿ ಸುದ್ದಿಗಳ ಮೇಲೆ ವಿಶೇಷ ನಿಗಾವಹಿಸಬೇಕು. ಜಿಲ್ಲಾಮಟ್ಟದ ಮಾಧ್ಯಮ ಪ್ರಮಾಣೀಕರಣ ಮತ್ತು ಉಸ್ತುವಾರಿ ಸಮಿತಿಗಳು ಪೇಡ್ ನ್ಯೂಸ್ ಸಾಪ್ತಾಹಿಕ ವರದಿಯನ್ನು ನಿಗದಿತ ಅವಧಿಯೊಳಗೆ ಸಲ್ಲಿಸಬೇಕು ಎಂದು ಸೂಚಿಸಿದರು.

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಈಗಾಗಲೇ ಜಿಲ್ಲೆಯ ವಿವಿಧೆಡೆ ಸ್ಥಾಪಿಸಿರುವ ಚೆಕ್‌ಪೋಸ್ಟಗಳಲ್ಲಿ ವಾಹನಗಳ ತಪಾಸಣಾ ಕ್ರಮವನ್ನು ಬಿಗಿಗೊಳಿಸಬೇಕು. 50 ಸಾವಿರ ಅಥವಾ 50 ಸಾವಿರ ರೂಪಾಯಿಗಳಿಗು ಅಧಿಕ ಹಣ ಒಯ್ಯುವವರು ಸಮರ್ಪಕ ದಾಖಲೆ ಹೊಂದಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಧರಿಸಿದ ಆಭರಣ ಹೊರತುಪಡಿಸಿ ದೊರೆಯುವ ಅಧಿಕ ಬೆಲೆಬಾಳುವ ಬಂಗಾರದ ಆಭರಣಗಳನ್ನು ವಶಪಡಿಸಿಕೊಳ್ಳಲು ಕ್ರಮ ವಹಿಸಬೇಕು ಎಂದು ಸೂಚನೆ ನೀಡಿದರು. ವಿಡಿಯೋ ಸಂವಾದದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಅನುರಾಧ ಜಿ., ವಿವಿಧ ತಾಲೂಕಿನ ತಹಸೀಲ್ದಾರರು ಮತ್ತು ವಿವಿಧ ಸಮಿತಿಗಳ ನೋಡಲ್ ಅಧಿಕಾರಿಗಳು ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.



ಹೊಸಪೇಟೆಯಲ್ಲಿ ಯುವ ರಾಜ್ ಕುಮಾರನ ಚೊಚ್ಚಲ ಸಿನಿಮಾ ಯುವ ಮೊದಲ ಶೋ ನೋಡಲು ರಾತ್ರಿ 2 ಗಂಟೆಯಿಂದ ಕಾದುನಿಂತ ಅಭಿಮಾನಿಗಳು

# ರಜನಿ ಉಮಾಪತಿಗೆ ರಾಜ್ಯಮಟ್ಟದ ಶ್ರೇಷ್ಠ ಮಹಿಳಾ ಇಂಜಿನಿಯರ್ ಪ್ರಶಸ್ತಿ

**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಪ್ರೌಢದೇವರಾಯ ತಾಂತ್ರಿಕ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿ ರಜನಿ ಉಮಾಪತಿ ಅವರಿಗೆ ಇನ್ಸ್ಟಿಟ್ಯೂಶನ್ ಆಫ್ ಇಂಜಿನಿಯಯರ್ಸ್ ಸಂಸ್ಥೆಯ ರಾಜ್ಯ ಘಟಕವು 'ಶ್ರೇಷ್ಟ ಮಹಿಳಾ ಇಂಜಿನಿಯರ್' (ಎಮಿನೆಂಟ್ ವುಮನ್ ಇಂಜಿನಿಯರ್) ಪ್ರಶಸ್ತಿ ನೀಡಿ ಗೌರವಿಸಿದೆ.



ಎಂಜಿನಿಯರಿಂಗ್ ವೃತ್ತಿಯಲ್ಲಿ ಅವರ ಸಾಧನೆ ಹಾಗೂ ಇನ್ಸ್ಟಿಟ್ಯೂಶನ್ ಆಫ್ ಇಂಜಿನಿಯಯರ್ಸ್ ಸಂಸ್ಥೆಯಲ್ಲಿ ಅವರು ತೋರಿದ ಸಂಘಟನಾ ಕೌಶಲ್ಯ ಗುರುತಿಸಿ ರಜನಿ ಉಮಾಪತಿ ಅವರಿಗೆ ಈ ಪ್ರಶಸ್ತಿ ನೀಡಲಾಗಿದೆ.

ರಾಜ್ಯದ ವಿವಿಧ ಭಾಗಗಳ ಒಟ್ಟು 10 ಮಹಿಳಾ ಸಾಧಕಿಯರಿಗೆ ಈ ಪ್ರಶಸ್ತಿ ನೀಡಲಾಗಿದೆ. ಬೆಂಗಳೂರಿನಲ್ಲಿ ಇನ್ಸ್ಟಿಟ್ಯೂಶನ್ ಆಫ್ ಇಂಜಿನಿಯಯರ್ಸ್ ಸಂಸ್ಥೆಯು ಆಯೋಜಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕೇರಳ ಹೈಕೋರ್ಟ್ ಮಾಜಿ ಮುಖ್ಯ ನ್ಯಾಯಮೂರ್ತಿ ಡಾ. ಮಂಜುಳಾ ಚೆಲ್ಲೂರ್ ಅವರು ಈ ಪ್ರಶಸ್ತಿ ವಿತರಿಸಿದರು. ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಖ್ಯಾತ ವಿಜ್ಞಾನಿ ಪದ್ಮಾವತಿ ಗೌರವ ಅತಿಥಿಗಳಾಗಿ ಪಾಲ್ಗೊಂಡಿದ್ದರು.

- Admissions
- Requirements
- Firm Branding
- Public Notice
- Change of Name

BOOK NOW!

Booking Open for Your Advertisements in Leading Local, State & National News Papers
9482599089 / 9448633038

- Obituary
- Remembrance
- Birthday wish ads
- Events Display &
- Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA